ವಿಶ್ವಾಂತರಂಗ

ಕವನ ಸಂಕಲನ

■ ವಿಶ್ವರೂಪ ಆಚಾರ್ಯ

ವಿಶ್ವರೂಪ ಪ್ರಕಾಶನ

ವಿಶ್ವರೂಪ ಆಚಾರ್ಯರು
ಸಂಸ್ಕೃತ ಉಪನ್ಯಾಸಕರು, ಸಾಹಿತಿಗಳು,
ಬಳ್ಳಾರಿ ಜ್ಞಾನಾಮೃತ ಪ್ರೌಢಶಾಲೆ ಮತ್ತು ಪದವಿ
ಪೂರ್ವ ಕಾಲೇಜು ಜ್ಞಾನಸಾಗರ, ಹೊಸಪೇಟೆ
ಹಾಗೂ ಬೆಂಗಳೂರು ಬೈ ಪಾಸ್‌ರೋಡ್
ಬಳ್ಳಾರಿ – 583102
ಮೊ: 9686260240

"VISHVANTARANGA"
A Poem Written by
Vishwaroopa Acharya

Published by
Vishwaroop Prakashana
Vishwaroop Acharya
Sanskrit Lecturer, Writer,
Bellary Gyanamrutha High School and
Pre-University College Gyansagar,
Hospet and Bangalore ByPass Road
Bellary - 583102, Mob: 9686260240

Copy right	Author
ಹಕ್ಕುಗಳು	ಲೇಖಕರದು
ಪ್ರಥಮ ಮುದ್ರಣ	2025
ಪುಟಗಳು	60 + 2
ಬೆಲೆ	80/–
ಪ್ರತಿಗಳು	1000
ಬಳಸಿದ ಕಾಗದ	70 ಜಿಎಸ್‌ಎಂ ಎನ್‌ಎಸ್ ಮ್ಯಾಪ್ಲಿಥೋ
ಅಳತೆ	1/8 ಡೆಮ್ಮಿ
First print	2025
Page	60 + 2
Price	80/-
Copies	1000
Paper Used	70 GSM NS Maplitho
Size	1/8 Demy
ರಕ್ಷಾಪುಟ ಮತ್ತು ಒಳ ಪುಟ ವಿನ್ಯಾಸ	ಕುಶ್ ರಾಮಾಚಾರಿ 9880181671
ಮುದ್ರಕರು	ಯಂತ್ರೋದ್ಧಾರಕ ಪ್ರಿಂಟರ್ sypp2019@gmail.com

ಆಶೀರ್ವಚನ

ಶ್ರೀ ಗುರುಭ್ಯೋ ನಮಃ,

"काव्यं यशसे" ಎಂಬಂತೆ, ನವ್ಯ ಹರಿಕಾರರಾಗಿ ಹಾಗೂ ಪ್ರಸಕ್ತವಾಗಿ ಪ್ರಸಿದ್ಧಿ ಪಡೆಯುತ್ತಿರುವ ನಮ್ಮ ಪ್ರಾಕ್ತನ ವಿದ್ಯಾರ್ಥಿ ಹಾಗೂ ಸಂಸ್ಕೃತ ಉಪನ್ಯಾಸಕರಾದ ಶ್ರೀ ವಿಶ್ವರೂಪ ಆಚಾರ್ಯ ಅವರ "ವಿಶ್ವಾಂತರಂಗ" ಎಂಬ 50 ಕವನಗಳ ಕವನಸಂಕಲನವನ್ನು ಪುಸ್ತಕ ರೂಪದಲ್ಲಿ ತರುತ್ತಿರುವುದು ನಮಗೆಲ್ಲ ಸಂತಸದ ವಿಷಯವಾಗಿದೆ.

ಅವರ ಈ ಕವನಸಂಕಲನವು ಕಾವ್ಯಲೋಕದ ರಥಕ್ಕೆ ಮುಡಿಯಲ್ಲಿ ಮುಡಿಸಿದ ಮಲ್ಲಿಗೆಯಂತೆ ಸದಾ ಸುಗಂಧಿತವಾಗಿರಲಿ ಎಂದು ಹಾರೈಸುತ್ತೇನೆ.

– ವಿದ್ವಾನ್ ಶ್ರೀಧರ ಭಟ್ಟ
ಸಂಸ್ಕೃತ ಶಿಕ್ಷಕರು ಹಾಗೂ ಪ್ರಾಂಶುಪಾಲರು
ವಿಶ್ವಬ್ರಾಹ್ಮಣ ಸಂಸ್ಕೃತ ವಿದ್ಯಾಪೀಠ, ಕೊಡಂಕೂರು, ಉಡುಪಿ

ಮುನ್ನುಡಿ

"ನಾನೃಷಿಃ ಕವಿರಿತ್ಯುಕ್ತಮೃಷಿಶ್ಚ ಕಿಲ ದರ್ಶನಾತ್" ಎಂಬ ಕಾವ್ಯಾನುಶಾಸನದ ಈ ಮಾತಿನಿಂದ ಋಷಿಯಾಗದವನು ಕವಿಯೂ ಆಗಲಾರ, ಹಾಗಾಗಿ ಕವಿಯು ಋಷಿಗೆ ಸದೃಶನಾಗಿಹನೆಂದು ತಿಳಿಯಲ್ಪಡುತ್ತದೆ. ಇನ್ನು ಈ ಕವಿಯ ಕಾರ್ಯವು ಕಾವ್ಯವೆಂಬುದಾಗಿ "ಕವೇಃ ಕರ್ಮ ಭವತಿ ಕಾವ್ಯಮ್" ಎಂಬೀ ಮಾತಿನಿಂದ ಸ್ಪಷ್ಟವಾಗುತ್ತದೆ. ಒಂದುವೇಳೆ ಕವಿಯಲ್ಲದವನು ಕೂತು ಹೀಗೆಯೇ ಸುಮ್ಮನೆ ನಾಲ್ಕು ಸಾಲು ಗೀಚಿದ ಕೂಡಲೇ ಅದು ಕಾವ್ಯವಾಗುವುದೋ !? ಎಂದರೆ ಖಂಡಿತವಾಗಿಯೂ ಇಲ್ಲ , ಆದರೆ ಸುಮ್ಮನೆ ನಾಲ್ಕು ಸಾಲು ಗೀಚದಿದ್ದರೂ ಕೂಡ ಕಾವ್ಯವಾಗುವುದಿಲ್ಲ. ಏಕೆಂದರೆ 'ಹಾಡುತ್ತಾ ಹಾಡುತ್ತಾ ರಾಗ' ಎಂಬಂತೆ ಕಾವ್ಯವೂ ಕೂಡ. ಇಲ್ಲಿ ಕಾವ್ಯರಚನೆಯ ಅಭ್ಯಾಸದಿಂದಲೇ ಕವಿತ್ವ ಸಿದ್ಧಿಸುವುದು.

ಈ ನಿಟ್ಟಿನಲ್ಲಿ ನಮ್ಮ ಆತ್ಮೀಯ ಮಿತ್ರರು, ಅಂತೇವಾಸೀ ವಿಶ್ವರೂಪಾಚಾರ್ಯರು ತಮ್ಮ ಗುರುಕುಲದ ಅವಧಿಯಲ್ಲಿಯೇ ಕವನರಚನೆಯ ಬಗ್ಗೆ ಅಭಿರುಚಿ, ಹವ್ಯಾಸ ಹಾಗೂ ಅಭ್ಯಾಸವನ್ನು ಹೊಂದಿದ್ದರು ಎಂದು ಇಲ್ಲಿ ಸ್ಮರಿಸಲಿಚ್ಛಿಸುತ್ತೇನೆ. ವಿಶ್ವರೂಪರು ತಮ್ಮ ಬಾಲ್ಯದಲ್ಲಿ ಗೀಚಿದ ಸಾಲುಗಳು ಅಂದು ಕಾವ್ಯವೆನಿಸದಿದ್ದರೂ ಆ ಸಾಲುಗಳೇ ಇಂದಿನ ಈ ಕಾವ್ಯರಚನೆಗೆ ಬುನಾದಿ ಆಗಿರುವುದರಲ್ಲಿ ಎರಡು ಮಾತಿಲ್ಲ. ಸಾಹಿತ್ಯ ಕ್ಷೇತ್ರದಲ್ಲಿ ಇವರು ಷೇರು ಮಾರುಕಟ್ಟೆಯ ವೃಷಭದಂತೆ ಏರುತ್ತಿರುವುದು ಇವರ ಕಾವ್ಯರಚನಾ ಕೌಶಲ್ಯ ಹಾಗೂ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ. ಇವರು 'ವಿಶ್ವರೂಪ' ಎಂಬ ಹೆಸರು ಹೊಂದಿರುವುದರಿಂದಲೇ ಸಾಹಿತ್ಯವೆಂಬ ಈ ಕುರುಕ್ಷೇತ್ರದಲ್ಲಿ ತಮ್ಮ "ವಿಶ್ವರೂಪದರ್ಶನ" ವನ್ನು ತೋರುತ್ತಿರುವಂತೆ ನನಗೆ ತೋರುತ್ತಿದೆ; ಆದರೆ ತಮ್ಮ ಈ ವಿಶ್ವರೂಪದರ್ಶನದಿಂದಲೇ ತಮ್ಮ ಈ ನಾಮವನ್ನು ಅನ್ವರ್ಥಕಗೊಳಿಸುತ್ತಿದ್ದಾರೆ ಎಂಬುದೇ ವಾಸ್ತವವಾಗಿದೆ.

ಇನ್ನು ವಿಶ್ವರೂಪರ ಕಾವ್ಯಲೋಕದ ಒಳಹೊಕ್ಕರೆ ಇವರ 'ಕರುನಾಡ ವೈಭವ', 'ಸಮರ', 'ಕೃಷ್ಣವೇಣಿ' ಮೊದಲಾದ ಕವಿತೆಗಳಲ್ಲಿ ಪ್ರತೀಪ, ಪರಿಣಾಮ,

ಉಪಮೆ, ರೂಪಕಾಲಂಕಾರ ಆದಿಯಾಗಿ ವಿವಿಧ ಅಲಂಕಾರಗಳು ಕಂಡುಬರುತ್ತವೆ.

"ಪ್ರಾಸವಿಲ್ಲದ ಪದವ ತಾಸು ಹಾಡಿದರೆ ಏನು !?,
ಸಾಸುವೆ ಎಣ್ಣೆ ಹದಮಾಡಿ ಕಣ್ಣಿಂಗೆ
ಸೂಸಿಕೊಂಡಂತೆ ಸರ್ವಜ್ಞ"

ಎಂಬ ಸರ್ವಜ್ಞರ ಮಾತು ಕವಿಗಳಿಗೆ ಪ್ರಾಸದ ಬಗೆಗಿನ ಒಲುಮೆಯನ್ನು ಹೆಚ್ಚಿಸುತ್ತದೆ. ಕವಿ ವಿಶ್ವರೂಪರ 'ಕರುನಾಡು ಕುವರಿ', 'ಬಾ ಕವಿತೆ' ಮುಂತಾದ ಕವನಗಳೂ ಇದಕ್ಕೆ ಹೊರತಾಗದೇ ಪ್ರಾಸಗಳಿಂದ ಅಲಂಕರಿಸಿಕೊಂಡಿವೆ.

ಇನ್ನು ಇವರ 'ಗರವಟಿಗ' ಮೊದಲಾದವುಗಳು ಕಿಂಚಿತ್ತು ಅರ್ಥಗಾಂಭೀರ್ಯವನ್ನು ಸೂಚಿಸಿದರೆ, ಇವರ "ಸಾಹಿತ್ಯಪ್ರಕಾರ" ಗಳು ಎಂಬ ಭಾಗದಲ್ಲಿರುವ 'ಪರ್ಷಿಯನ್ ಶೈಲಿ', 'ಜೋಡುನುಡಿ', 'ರೂಬಾಯಿ' ಮೊದಲಾದ ಕವನಗಳು ಇವರಲ್ಲಿನ ಕಾವ್ಯರಚನಾವೈವಿಧ್ಯತೆಗೆ ಹಿಡಿದ ಕೈಗನ್ನಡಿಯಾಗಿವೆ.

ವಿಶ್ವರೂಪರ ಈ ಅಂಬೆಗಾಲಿನ ಹೆಜ್ಜೆಗಳು, ಮುಂದೆ ಸಹಸ್ರಾರು ಯೋಜನಗಳನ್ನು ಕ್ರಮಿಸುವ ತ್ರಿವಿಕ್ರಮನ ಹೆಜ್ಜೆಗಳಾಗಲಿ ಎಂದು ಮನದುಂಬಿ ಹಾರೈಸುವೆನು. ನನ್ನ ಮಿತ್ರನಿಂದ ಇನ್ನೂ ಇಂತಹ ನೂರಾರು ಸಾಹಿತ್ಯ ಸುಮಗಳು ಅರಳುತ್ತ ತನ್ನ ಸುವಾಸನೆಯನ್ನು ಎಲ್ಲೆಡೆ ಪಸರಿಸಲಿ ಎಂದು ಆಶಿಸುತ್ತೇನೆ. ಪ್ರಸ್ತುತ 'ವಿಶ್ರಾಂತರಂಗ' ವೆಂಬ ಪುಸ್ತಕವು ನಾಡಿನ ಸಹೃದಯರ ಹೃದಯವನ್ನು ಅಪಹರಿಸುವಂತಾಗಲಿ. ಶುಭಮಸ್ತು.

– ಎನ್. ಆಚಾರ್ಯ ವಿಶ್ವನಾಥ ಶರ್ಮಾ
ಸಂಸ್ಕೃತ ಶಿಕ್ಷಕರು
ಬೆಂಗಳೂರು

ಅಭಿನಂದನಾ ಸಂದೇಶ

ಸಾಹಿತ್ಯ ಲೋಕದಲ್ಲಿ ಹೊಸ ಕಿರಣವಾಗಿ ಬೆಳಗುತ್ತಿರುವ ಕವಿ ಶ್ರೀ ವಿಶ್ವರೂಪ ಆಚಾರ್ಯರು, ತಮ್ಮ ಚೊಚ್ಚಲ ಕೃತಿ "ವಿಶ್ರಾಂತರಂಗ" ಕವನಸಂಕಲನದ ಮೂಲಕ ಕಾವ್ಯದ ಲೋಕದಲ್ಲಿ ಹೊಸ ಚೈತನ್ಯವನ್ನು ತಂದಿದ್ದಾರೆ.

ಈ ಸಂಕಲನವು ಕೇವಲ ಕವನಗಳ ಸಂಗ್ರಹವಲ್ಲ, ಅದು ಕವಿಯ ಮನದೊಳಗಿನ ಆಳವಾದ ಭಾವನೆಗಳ ಪ್ರತಿಫಲನ. ಪ್ರತಿಯೊಂದು ಕವನವೂ ಜೀವನದ ಸತ್ಯವನ್ನು ಹುಡುಕುವ ಪ್ರಯತ್ನ, ನಿಸರ್ಗದ ನಾದದಲ್ಲಿ ಮೌನದ ಅರ್ಥವನ್ನು ಪತ್ತೆಹಚ್ಚುವ ಧ್ವನಿ.

ಕವಿಯ ಕಲ್ಪನೆಗಳು ಸರಳ ಶಬ್ದಗಳಲ್ಲಿ ಸೊಗಸಾಗಿ ಅರಳಿವೆ. ಅವು ಜೀವನದ ಸಂತೋಷ–ದುಃಖಗಳ, ಹೃದಯದ ನುಡಿಗಳ ಮತ್ತು ಮಾನವೀಯ ಮೌಲ್ಯಗಳ ಸ್ಪಂದನವನ್ನು ಒಡನಾಡಿಯಂತೆ ಹೇಳುತ್ತವೆ. ಓದುಗರ ಮನಸ್ಸಿನಲ್ಲಿ ಆತ್ಮಾವಲೋಕನ ಮತ್ತು ಹೊಸ ಚಿಂತನೆಗೆ ಸ್ಫೂರ್ತಿ ನೀಡುವ ಶಕ್ತಿ ಈ ಕವನಗಳಲ್ಲಿ ಅಡಕವಾಗಿದೆ.

"ವಿಶ್ರಾಂತರಂಗ" ಕೃತಿಯು ಸಾಹಿತ್ಯಾಸಕ್ತರ ಮನದಲ್ಲಿ ಹೊಸ ಸ್ಪಂದನವನ್ನು ಹುಟ್ಟಿಸಿ, ಕವಿಯ ಸಾಹಿತ್ಯಯಾನಕ್ಕೆ ಶ್ರೇಷ್ಠ ಪ್ರಾರಂಭವಾಗಲಿ ಎಂದು ಹಾರೈಸುತ್ತೇನೆ. ಕನ್ನಡ ಕಾವ್ಯ ಲೋಕದಲ್ಲಿ ಈ ಸಂಕಲನವು ವಿಶಿಷ್ಟ ಗುರುತು ಮೂಡಿಸಿ, ಮುಂದಿನ ಪೀಳಿಗೆಗಳಿಗೆ ಪ್ರೇರಣೆಯಾಗಿ ಉಳಿಯಲಿ ಎಂಬದು ನನ್ನ ಹಾರೈಕೆ.

ಹೃದಯಪೂರ್ವಕ ಅಭಿನಂದನೆಗಳು ಮತ್ತು ಶುಭಾಶಯಗಳು...

– ಬಸವರಾಜ ಬಿಸಲಹಳ್ಳಿ
ಗೌರವಾಧ್ಯಕ್ಷರು
ಶ್ರೀ ಮಹಾದೇವ ಎಜುಕೇಶನ್ ಆರ್ಟ್
ಅಂಡ್ ಕಲ್ಚರಲ್ ಟ್ರಸ್ಟ್ (ರಿ), ಬಳ್ಳಾರಿ.
ಜಿಲ್ಲಾ ಸಂಘಟನಾ ಕಾರ್ಯದರ್ಶಿ,
ಕನ್ನಡ ಸಾಹಿತ್ಯ ಪರಿಷತ್ತು, ಬಳ್ಳಾರಿ



1. ಕರುನಾಡ ವೈಭವ

ನಾಟ್ಯ ಕಾವ್ಯ–ಗಾನಾಮೃತವನಾಸ್ವಾದಿಸಿ,
ಮಯೂರ–ಹರಿಣ–ಕೋಗಿಲೆಗಳ ಸ್ನೇಹ ಗಳಿಸಿ,
ಪಂಪ–ರನ್ನ–ಜನ್ನರ, ಅಂತರಾಳದಿ ಸ್ಮರಿಸಿ,
ಕಂಡೆನು ವೈಭವ, ಕರುನಾಡ ವೈಭವ ॥ 1 ॥

ತಾಳೆಗರಿಯ ಸಾರ ಸಾಗರದಲಿ ಇಳಿದು,
ಶಾಸನದಲಿ ಚಂದನವನವನು ತಿಳಿದು,
ಆ ಜಕಣನ ಶಿಲ್ಪದಿ ಧನ್ಯತೆಯ ಪಡೆದು,
ಕಂಡೆನು ವೈಭವ, ಕರುನಾಡ ವೈಭವ ॥ 2 ॥

ಕಾವೇರಿ ತಾಯಿಯ ಉಗಮದ ತಾಣ,
ಅರ್ಣವ ಅಲೆಗಳ ಸುಂದರ ನೃತ್ಯನ
ಹಂಪಿಯ ಹಾಡುವ ಕಂಬದ ಗಾನ,
ಕಂಡೆನು ವೈಭವ, ಕರುನಾಡ ವೈಭವ ॥ 3 ॥

ಪಡೆಯುತ ಕನಕದ ಕಾಗದವನ್ನು,
ಮಯೂರ ಗರಿಯ ಲೇಖನಿ ಪಿಡಿದು,
ಶತ–ಶತಮಾನದ ಕಬ್ಬಿಗನಂತೆ,
ವರ್ಣಿಪೆ ವೈಭವ, ಕರುನಾಡ ವೈಭವ ॥ 4 ॥

ಇಮ್ಮಡಿಯ ರಾಜ್ಯದಿ ಮುಂದಡಿಯನಿಡುತ,
ಕದಂಬರಾದಿ ರಾಜವಂಶಕೆ ಶಿರವ ಬಾಗುತ,
ತಾಯಿ ಭುವನೇಶ್ವರಿಯ ಮಡಿಲ ಸೇರುತ,
ಕಂಡೆನು ವೈಭವ, ಕರುನಾಡ ವೈಭವ ॥ 5 ॥

2. ಕೃಷ್ಣವೇಣಿ

ಎಲೈ ! ಕೃಷ್ಣವೇಣಿ, ಈ ನಿನ್ನ
ಮುಖ ಕಮಲದ ಕಾಂತಿಯೇ
ಬೆಳದಿಂಗಳಾಗಿರುವಾಗ
ನಿನ್ನ ನೋಡಲು ದೀಪವೇತಕೆ?! ॥ 1 ॥

ನಿನ್ನ ನಯನದ ರಶ್ಮಿಯು
ಜೀವಿಗಳ ಮಾರ್ಗದರ್ಶಕ
ಕವಿಗೂ ದಾರಿ ತೋರುವಾಗ
ನಿನ್ನ ಸೇರಲು ತಡವೇತಕೆ ?! ॥ 2 ॥

ನಿನ್ನ ವಾಣಿಯ ಮಾಧುರ್ಯವೇ
ಸಪ್ತಸ್ವರವಾಗಿರುವಾಗ,
ನಾಟ್ಯದಲಿ ಮಯೂರನನ್ನೇ
ಆಯ್ದಿರಲು ಸ್ಪರ್ಧೆಯೇತಕೆ ?! ॥ 3 ॥

ನಿನ್ನ ಅಂದದ ವೈಭವವೇ
ಆ ನೀಲಮೇಘ ಶ್ಯಾಮನಿಗೆ,
ಪಿಳ್ಳಂಗೋವಿಯಾಗಿರುವಾಗ
ಇನ್ನು ನನ್ನ ವರ್ಣನೆಯೇತಕೆ ?! ॥ 4 ॥

3. ಸಮರ

ಸಖಿಯೇ, ನಿನ್ನ ಕಪ್ಪು ಮುಡಿಗೆ
ತಾನೇ ಅಲಂಕರಿಸಲೋಸುಗ,
ಶಂಖ ಪುಷ್ಪವು ಪಾಟಲದೊಂದಿಗೆ
ನಿಂತಿದೆ ಮಾಡಲು ಸಮರ ॥ 1 ॥

ನಿನ್ನ ಇಂಚರ ಮಧುರ ವಾಣಿಗೆ
ತಾನೇ ಇನಿದನಿಯಾಗಲೋಸುಗ,
ಷಡ್ಜರಾಗವು ಪಂಚಮದೊಂದಿಗೆ
ನಿಂತಿದೆ ಮಾಡಲು ಸಮರ ॥ 2 ॥

ನಿನ್ನ ನವಿರು ಪದತಲಕೆ
ತಾನೇ ಪಾರಾಣಿಯಾಗಲೋಸುಗ,
ಮದರಂಗಿಯು ಪತಂಗದೊಂದಿಗೆ
ನಿಂತಿದೆ ಮಾಡಲು ಸಮರ ॥ 3 ॥

ನಿನ್ನ ನುಣೂಪು ನಖದ ಮೇಲೆ
ತಾನೇ ಬಣ್ಣ ಲೇಪವಾಗಲೋಸುಗ,
ಇಂದ್ರ ಚಾಪವು ಗೋಸುಂಬೆಯೊಂದಿಗೆ
ನಿಂತಿದೆ ಮಾಡಲು ಸಮರ ॥ 4 ॥

ನಿನ್ನ ಜ್ಯೋತ್ಸ್ನದ ರೂಪರಾಶಿಯ
ತಾನೇ ವರ್ಣಿಸಿ ಬರೆಯಲೋಸುಗ
ಪೌರಾಣಿಕವು ನವೀನದೊಂದಿಗೆ
ನಿಂತಿದೆ ಮಾಡಲು ಸಮರ ॥ 5 ॥

4. ಶುಭಾಂಶು ಸಖಿ

ಶುಭಾಂಶುಸಖಿಯೇ ನಿನ್ನ ಹಸ್ತದ
ವಟಪತ್ರದಲಿ ಅಭ್ರಪುಷ್ಪದ ಕೃಷ್ಣನು
ಆಡುತ, ಪಾಡುತ ರಾರಾಜಿಸುತಿರಲು
ಮತ್ತೇಕೆ ಈ ಲಜ್ಜೆ !? ॥ 1 ॥

ನಿನ್ನ ಮುಂಗುರುಳ ಗಂಧವಾರಿಯೇ
ಆ ಅಬ್ಜನಿಗೆ ಚಿಮುಇಸಿ
ಸ್ವಾಗತವನು ಕೋರುತಿರಲು
ಮತ್ತೇಕೆ ಹುಬ್ಬುಗಂಟು !? ॥ 2 ॥

ನಿನ್ನ ಆನನದ ಸರೋವರದಲ್ಲಿ
ಗುಳಿಕೆನ್ನೆಯ ಅಂಚೆಯು
ಸಂತಸದಿ ವಿಹರಿಸುತಿರಲು
ಮತ್ತೇಕೆ ನಾಸಿಕಾಭಿನಯ ?! ॥ 3 ॥

ಆ ವಿಷ್ಣುಕ್ರಾಂತ ಪತ್ರದ ಮೇಲೆ
ಬಿದ್ದ ಮಳೆ ಹನಿಯೇ
ನಿನಗೆ ದರ್ಪಣವಾಗಿರಲು
ಮತ್ತೇಕೆ ಮಣಿದರ್ಪಣ !? ॥ 4 ॥

ನಿನ್ನ ನಖದ ಸೊಬಗನ್ನು
ತಿಳಿಯಬೇಕೆಂದು ಮಹತಿಯ ತಂತಿಯು
ತನ್ನ ತಾ ಪರಿಚಯಿಸುತಿರಲು
ಮತ್ತೇಕೆ ನನ್ನ ಪರಿಚಯ ?! ॥ 5 ॥



5. ಉತ್ಪಲ ಪ್ರಿಯೇ

ಉತ್ಪಲ ಪ್ರಿಯೇ
ನಿನ್ನ ಕರಭೂಷಣಕ್ಕೆ ಇಂಚರವಾಗುವ
ಆ ಹಂಸರಾಗಕ್ಕೆ
ನಾ ನೀಡುವೆ ಸ್ವಾಗತ ಪುಷ್ಪ !! ॥ 1 ॥

ನಿನ್ನ ಕಂಗಳ ರೆಪ್ಪೆಗೆ
ಬಣ್ಣ ಹಚ್ಚುವ
ಆ ಪತಂಗಗಳಿಗೆ
ನಾ ನೀಡುವೆ ಸ್ವಾಗತ ಪುಷ್ಪ !! ॥ 2 ॥

ನಿನ್ನ ಅಂದಕ್ಕೆ ದರ್ಪಣವಾಗುವ
ತುಳಸಿ ಪರ್ಣದ ಮೇಲೆ
ಬಿದ್ದ ಮಳೆ ಹನಿಗೆ
ನಾ ನೀಡುವೆ ಸ್ವಾಗತ ಪುಷ್ಪ !! ॥ 3 ॥

ನಿನ್ನ ಕೋಮಲ ಪಾದಗಳಿಗೆ
ಪಾರಾಣಿಯಾಗುವ
ಆ ಮದರಂಗಿಗೆ
ನಾ ನೀಡುವೆ ಸ್ವಾಗತ ಪುಷ್ಪ !! ॥ 4 ॥

ನಿನ್ನ ಕಪೋಲವನ್ನು ನವನೀತ ಚೋರನ
ಕೆನ್ನೆ ಎಂದು ಭಾವಿಸಿ
ಮುತ್ತು ನೀಡುವ ಆ ಗೋವಿನ ಕರುವಿಗೆ
ನಾ ನೀಡುವೆ ಸ್ವಾಗತ ಪುಷ್ಪ !! ॥ 5 ॥

ನಿನ್ನ ಶೃಂಗಾರಕ್ಕೆ ಆಭರಣವಾಗುವ
ವಿಯತ್ತಳದಲ್ಲಿರುವ ಶತಹ್ರದಕ್ಕೆ
ನಾ ನೀಡುವೆ ಸ್ವಾಗತ ಪುಷ್ಪ !!॥ 6 ॥

ನನ್ನ ಅಂತರಂಗದಿ ಮೂಡಿದ
ಕಾವ್ಯ ಕುಸುಮವನ್ನು ನಿನ್ನ ಮನಸೆಂಬ
ಮುಡಿಗೆ ಮುಡಿಸಲು ಸಹಾಯವಾಗುವ
ಆ ಕಲ್ಪನೆಗೆ ನಾ ನೀಡುವೆ ಸ್ವಾಗತ ಪುಷ್ಪ !! ॥ 7 ॥

6. ಅಮೃತಾಂಶು ಪ್ರಿಯೇ

ಅಮೃತಾಂಶು ಪ್ರಿಯೇ,
ನಿನ್ನ ಕಂಠ ಸಿರಿಯ
ಸ್ವರ ಮಾಧುರ್ಯದಿಂದ
ಅಪಾಂಪತಿಗೆ ನಿಹ್ರಾದದ ಪಾಠ ಹೇಳಿರುವೆ ॥ 1 ॥

ನಿನ್ನ ನಳಿನನಯನದ
ಥಳ-ಥಳಿಪ ಹೊಳಪಿನಿಂದ
ಶಕ್ರಧನುವಿಗೆ ಬಣ್ಣಗಳ ರಚನೆ ಹೇಳಿರುವೆ ॥ 2 ॥

ನಿನ್ನ ಕೋಮಲ ಕರದ
ಮದರಂಗಿಯ ಚಿತ್ತಾರದಿಂದ
ಶಿಖಿಗಳಿಗೆ ಗರಿಗೆದರುವ ಪರಿಚಯ ಹೇಳಿರುವೆ ॥ 3 ॥

ನಿನ್ನ ಈ ಮಂದಹಾಸದ
ಧವಲ ಕಾಂತಿ ರಾಶಿಯಿಂದ
ಅಮೃತಾಂಶುವಿಗೆ ಬೆಳಕು ಸೂಸೂವುದನು ॥ 4 ॥
ಹೇಳಿರುವೆ

ಹಲವಾರು ಕಾವ್ಯಗಳ
ಬಹುಪಾಲು ಉಪಮಾನಗಳೇ
ನಿನ್ನಿಂದ ಕಲಿತಿರಲು, ನಾನಿನ್ನು
ವರ್ಣಿಸಲು ಏನು ಉಳಿದಿವೆ ?! ॥ 5 ॥

7. ಕೌಮುದಿ ಪ್ರಿಯೇ

ಕೌಮುದಿ ಪ್ರಿಯೇ, ನಿನ್ನ
ಗುಂಗುರು ಮುಂಗುರುಳು,
ನಿನ್ನ ಮುದ್ದಾದ ಕೆನ್ನೆಯನು
ವೇದಿಕೆಯೆಂದು ಎಣಿಸಿ ನಾಟ್ಯವಾಡಿದೆ. ॥ 1 ॥

ಅಂಬರದಿಂದುರುಳಿದ
ಅಂಬುವಿನ ಕಣಕಣವು
ನಿನ್ನ ಸುಕೋಮಲ ಕರವನ್ನು
ಶುಕ್ತಿಯೆಂದು ಎಣಿಸಿ ಬಂದು ಸೇರಿದೆ ॥ 2 ॥

ಸಂಗೀತದ ಷಡ್ಜ ಸ್ವರವು
ಧ್ವನಿ ತರಂಗದಿಲ್ಲಿ ಹಾದು ಬಂದು,
ನಿನ್ನ ಸುಶ್ರಾವ್ಯ ಇಂಚರವನ್ನು
ಮಯೂರವೆಂದು ಎಣಿಸಿ ನಿನ್ನ ಕೂಡಿದೆ ॥ 3 ॥

ಅಷ್ಟು ಶೋಭಿಸುತಿಹರೇ
ನಿನ್ನ ಅಂದಕೆ ಸೋಲುತಿರಲು,
ವರ್ಣಿಸಲು ವಸ್ತುಗಳು ಸಿಗದಂತೆ
ಆಯಿತೆಂದು ಎಣಿಸಿ ಬರಹ ಮುಗಿಸಿದೆ. ॥ 4 ॥

8. ಕರುನಾಡ ಕುವರಿ

ಹಿಡಿಯುತ ಕಾರ್ತಿಕ ದೀಪವನು
ಕರುನಾಡ ಕುವರಿ ಬರುತಿಹಳು,
ಹೊಳೆಯುವ ಅಕ್ಷರ ಕಾಂತಿಯಿಂದ
ಬದುಕಲಿ ಜ್ಯೋತಿಯನ್ನು ಬೆಳಗಿಹಳು ॥ 1 ॥

ಧರಿಸುತ ಇಳಕಲ್ ಸೀರೆಯನು
ತಳುಕುತು ಬಳುಕುತ ನಡೆಯುವಳು,
ಬೇಲೂರು ಶಿಲೆಗಳ ಕಾಂತಿಯಿಂದ
ನನ್ನಲೂ ಕವಿತೆಯ ತಂದಿಹಳು ॥ 2 ॥

ಜಲಪಾತ ಕಾಣುತ ಜೋಗಿನಲಿ
ವಚನವ ಪಾಡುತ ರಾಗದಲಿ,
ಬಳಸುತ ಕನ್ನಡ ಭಾಷೆಯನು
ನನ್ನನು ಕವಿಯಾಗಿ ಮಾಡಿಹಳು ॥ 3 ॥



9. ಸಂಕಲ್ಪ

ಸಖಿಯೇ ನಿನ್ನ ವೇಣಿಯ
ಆಂದೋಳದಿ
ನಲಿದಾಡಬೇಕೆಂದು ಹೊಂಬಾಳೆಯ
ಮಗುವು ಮಾಡುತಿದೆ ಸಂಕಲ್ಪ

ನಿನ್ನ ನಖದ ನುಣುಪುತನಕೆ
ಬಿಳಿ ವರ್ಣವಾಗಬೇಕೆಂದು
ಆ ಹಂಸ ವರ್ಣವು
ಮಾಡುತ್ತಿದೆ ಸಂಕಲ್ಪ !!

ನಿನ್ನ ನಾಸಿಕದ ಸೌಂದರ್ಯಕ್ಕೆ
ಮೌಕ್ತಿಕವಾಗಬೇಕೆಂದು
ಗೋಮೇಧಕ ರತ್ನವು
ಮಾಡುತ್ತಿದೆ ಸಂಕಲ್ಪ !!

ನಿನ್ನ ಕೋಮಲ ಹಸ್ತದಿ
ಮದರಂಗಿಯಾಗಬೇಕೆಂದು
ಆ ಸ್ವಸ್ತಿ ಶ್ರೀಗಳು
ಮಾಡುತ್ತಿದೆ ಸಂಕಲ್ಪ !!



10. ಗಂಧವತಿ ಪ್ರಿಯೇ

ಗಂಧವತಿ ಪ್ರಿಯೇ !
ನಿನ್ನ ನಖದ ಪ್ರಖರವನ್ನು
ಸ್ಪರ್ಶಿಸಬೇಕೆಂದು ಆ ಮಹತಿಯು
ನೀಡುತ್ತಿದೆ ಅಭಿಜ್ಞಾಪತ್ರ !!

ನಿನ್ನ ಸುನಯನದ ಜೊತೆಗೆ
ಸ್ನೇಹವನ್ನು ಬಯಸಬೇಕೆಂದು
ಆ ಕಸ್ತೂರಿಯು
ನೀಡುತ್ತಿದೆ ಅಭಿಜ್ಞಾಪತ್ರ !!

ನಿನ್ನ ಸುನಯನ ಸೌಷ್ಠವಕ್ಕೆ
ಸ್ನೇಹವನ್ನು ಬಯಸಬೇಕೆಂದು
ಆ ಕಸ್ತೂರಿಯು
ನೀಡುತ್ತಿದೆ ಅಭಿಜ್ಞಾಪತ್ರ !!

ನಿನ್ನ ಸುಭಾಷಿತ ಮಾಧುರ್ಯಕ್ಕೆ
ಪರಿಚಯವಾಗಬೇಕೆಂದು
ಆ ಹಂಸರಾಗವು
ನೀಡುತ್ತಿದೆ ಅಭಿಜ್ಞಾಪತ್ರ !!

ನಿನ್ನ ಚಾರು ವಕ್ತ್ರದೊಂದಿಗೆ
ಗೆಳೆತನವಾಗಬೇಕೆಂದು
ಹೊಸದಾದ ಕೌಮುದಿಯು
ನೀಡುತ್ತಿದೆ ಅಭಿಜ್ಞಾಪತ್ರ !!

11. ಪ್ರಕೃತಿ ಕಾಂತಿ

ಹೊಸದಾದ ಸೃಷ್ಟಿಗೆ ಚೈತ್ರಮಾಸದ ಕವಿತೆಯು
ಚೈತ್ರಮಾಸದ ಕವಿತೆಗೆ ವಸಂತ ಋತುವಿನ ಗಾನವು
ವಸಂತ ಋತುವಿನ ಗಾನಕ್ಕೆ ನವಿಲುಗಳ ನರ್ತನವು
ನರ್ತನದ ಕರೆಗೆ ಧರೆಗಿಳಿದ ಮಳೆ ಹನಿಯು

ಶುಭ್ರವಾದ ಕುಸುಮಗಳೇ ದುಂಬಿಗೆ ದರ್ಪಣವು
ಹಸಿರೆಲೆ ತರುಣಿಗೆ ಚಿಟ್ಟೆಯ ವೇಣಿ ಪಟ್ಟಿಯು
ಅರ್ಣವದ ಯಕ್ಷಗಾನಕ್ಕೆ ಶಂಖಗಳ ಭಾಗವತಿಗೆಯು
ನೋಡು ಬಾ ಗೆಳತಿ ಈ ಪ್ರಕೃತಿಯ ಕಾಂತಿ

ಸರೋವರದ ವೇದಿಕೆಗೆ ಹಂಸಗಳ ಜಾನಪದವು
ಹಂಸಗಳ ಜಾನಪದಕ್ಕೆ ಕಮಲಗಳ ಛಾಯಾಗ್ರಹಣವು
ಹೇಳು ಬಾ ಗೆಳತಿ, ಈ ಪ್ರಕೃತಿಗೆ ಸ್ವಸ್ತಿ
ನೋಡು ಬಾ ಈ ಪ್ರಕೃತಿಯ ಕಾಂತಿ !!

12. ಹಸಿರಿನ ಪಾಠ

ನಿನ್ನಯ ಬಳೆ-ಗಿಳೆಯ ಸ್ವರ-ಗಿರ
ಆ ಅಜ್ಜ-ಗಿಜ್ಜನನ್ನು
ಕವಿ-ಗಿವಿಯನ್ನಾಗಿಸಿದೆ

ನಿನ್ನ ಕಂಗಳು ಗಿರಿಗಳ ರೆಪ್ಪೆ
ಗಿಪ್ಪೆಗೆ ಅಲಂಕಾರ ಗಿಲಂಕಾರ
ವಾಗಬೇಕೆಂದು ಚಿಟ್ಟೆ ಗಿಟ್ಟೆಯು ಬಯಸಿದೆ....

ಆ ಕಪೋಲ ಗಿಪೋಲದ
ಅಂದ ಚೆಂದವನ್ನು ಪಡೆಯಬೇಕೆಂದು
ಶಶವು ಗಿಶವು ಬಯಸಿದೆ....

ನಿನ್ನಯ ನೂಪುರ ಗಿಪೂರದ
ನಾದ ಗೀದ ವೇಣು ಗೀಣುವಿಗೆ
ಪಾಠ ಗೀಠ ಮಾಡಿದೆ....

ನಿನ್ನ ಮಂದಹಾಸ ಗಿಂದಹಾಸ
ಹರಿಣ ಗಿರಿಣಕ್ಕೆ ಆಮೋದ ಗೀಮೋದದ
ಪಾಠ ಗೀಠ ಹೇಳಿದೆ

ಆ ರೂಪ, ಗೀಪದ ರಶ್ಮಿ ಗಿಶ್ಮಿಯು
ಹರಿತ ಗಿರಿತ ಪರ್ಣ ಗಿರ್ಣಗಳಿಗೆ
ಹಸಿರು ಗಿಸಿರಿನ ಬಣ್ಣ ಗಿಣ್ಣದ
ಪಾಠ ಗೀಠ ಮಾಡಿದೆ

13. ಸಖಿ

ಸಖಿಯೇ ನಿನ್ನ ಕಂಗಳ ರೆಪ್ಪೆಗೆ
ಬಣ್ಣ ಹಚ್ಚಲು ಆ ಪತಂಗವು
ನಡುಗುತ್ತಿದೆ ಅದಕ್ಕಾಗಿ ಇಂದ್ರಧನುವನ್ನು
ವರ್ಣಿಸಿರುವೆ ಅನುಮತಿ ನೀಡುವೆಯ....

ನಿನ್ನ ಉಂಗುರದಲ್ಲಿ ಇರುವ
ರತ್ನದ ಶೋಭೆ ಕಡಿಮೆ ಆಗಿದೆ
ಅದಕ್ಕಾಗಿ ಗೋಮೇಧಕ ರತ್ನವನ್ನು
ವರ್ಣಿಸಿರುವೆ ಅನುಮತಿ ನೀಡುವೆಯ....

ನಿನ್ನ ಕರ್ಣಲೋಲಕವು ಮುನಿಸಿದೆ
ಅದಕ್ಕಾಗಿ ಕೌಸ್ತುಭವನ್ನು
ವರ್ಣಿಸಿರುವೆ ಅನುಮತಿ ನೀಡುವೆಯ....

ನಿನ್ನ ಕೆನ್ನೆಯ ತಾಳೆಗರಿಯಲ್ಲಿ ಮುಂಗುರುಳ
ಮಯೂರಗರಿಯ ಚಂಪಕಮಾಲವೃತ್ತದ
ಕಾವ್ಯವನ್ನು ರಚಿಸುವ ಸಮಯ

ಆ ನಾಸಿಕದ ಕುಸುಮದಲ್ಲಿ
ಮುತ್ತಿನ ಮೂಗುತಿಯ ಪತಂಗವು
ಕಂಡು ಮಂದಸ್ಮಿತನಾದೆ

ಅವಳ ಆನನದ ಆಗುಂಬೆಯಲ್ಲಿ ಮೊಡವೆಯ
ಅರಣಿಯ ಉದಯವಾಗುವ ಸೊಬಗು
ನೋಡುವುದೆ ಚೆಂದ ಹೀಗೆ ವರ್ಣಿಸುತ್ತ ಮತ್ತೆ
ವಸ್ತುಗಳನ್ನು ಆಸ್ವಾದಿಸಲು ಹೊರಟೆ

14. ಅರ್ಣವ ಪ್ರಿಯೇ



ಅರ್ಣವ ಪ್ರಿಯೇ ಆ ವನಸ್ಪತಿಗೆ
ಸುಗಂಧದ ತರಗತಿ
ನೀನು ಹೇಳಿಕೊಟ್ಟಿರುವಾಗ ಮತ್ತೇಕೆ
ಪಾರಿಜಾತದ ವರ್ಣನೆ

ಆ ಜಿಂಕೆಗಳು ತನ್ನ ಮೈ ಕಾಂತಿಗೆ
ನಿನ್ನ ರೂಪದ ಚಿತ್ರವನ್ನು
ಹಾಕಿಕೊಂಡಿರುವಾಗ ಮತ್ತೇಕೆ
ಚಿತ್ರ ಕಲೆಯ ವರ್ಣನೇ

ಆ ಸ್ವಸ್ತಿ ಶ್ರೀಗಳು ನಿನ್ನ ಕೋಮಲ
ಹಸ್ತಕ್ಕೆ ಮದರಂಗಿಯಾಗಿ
ಶೋಭಿಸಿರುವಾಗ ಮತ್ತೇಕೆ
ಬೇರೆ ಸೌಂದರ್ಯಗಳ ವರ್ಣನೇ

ಕವಿಗಳೇ ನಿನ್ನ ಅಂದದಿ
ಮೈ ಮರೆತು ನಿನ್ನನ್ನು ವರ್ಣಿಸಿ
ಬರೆದಿರುವಾಗ ಮತ್ತೇಕೆ
ನನ್ನ ವರ್ಣನೇ

15. ಮನದ ಕವಿತೆ

ಆಕಾಶದಲ್ಲಿ ನೀನಾಗಿ ಬಾ ಆಕಾಶ ಗಂಗೆಯಾಗಿ
ತಾರೆಗಳಲ್ಲಿ ನೀನಾಗಿ ಬಾ ಧ್ರುವತಾರೆಯಾಗಿ
ಪುಷ್ಪಗಳಲ್ಲಿ ನೀನಾಗಿ ಬಾ ಮಂದಾರ ಪುಷ್ಪವಾಗಿ
ನೀನಾಗಿ ಬಾ ನನ್ನ ಹೃದಯದಲ್ಲಿ ಪ್ರೀತಿಯ ದೇವತೆಯಾಗಿ

ನಿನ್ನ ವದನದಲ್ಲಿ ಒಂದು ಕಮಲ ಅರಳಿದೆ
ಸೂರ್ಯ ನಿಂದಲ್ಲ ನೀರಿನ ಹನಿಗಳಿಂದಲ್ಲ
ನಿನ್ನ ಮಂದಹಾಸ ವೆಂಬ ಪ್ರಕಾಶದಿಂದ

ನನ್ನ ಮನದಲ್ಲಿ ಒಂದು ವರ್ಷಧಾರೆಯು ಹರಿಯುತ್ತಿದೆ
ಅದು ಮೇಘಗಳಿಂದಲ್ಲ ಯಾವ ಪೂಜೆಯ ಫಲಗಳಿಂದಲ್ಲ
ನಿನ್ನ ಪ್ರೀತಿಯ ನೆನಪುಗಳಿಂದ

ನನ್ನ ಮನದಲ್ಲಿ ಒಂದು ದೀಪ ಬೆಳಗುತ್ತಾ ಇದೆ
ಆ ದೀಪ ದೀಪಾವಳಿಯ ವಿಶೇಷವಲ್ಲ
ಯಾವ ಉದ್ಘಾಟನೆಯ ಸಮಾರಂಭದ ದೀಪವಲ್ಲ
ಕಲ್ಮಶವಿಲ್ಲದ ಸ್ನೇಹ ಎಂಬ ದೀಪವು ಬೆಳಗುತ್ತಾ ಇದೆ.

16. ಕಾವ್ಯ ದೇವತೆಗೆ ನನ್ನ ನಮನ

ಯಾವ ಸಮಯದಲ್ಲಿ ಯಾರ ನುಡಿಯಲ್ಲಿ
ಕಾವ್ಯ ಉತ್ಪನ್ನವಾಗುತ್ತಿದೆಯೋ ಅಂತಹ ಕಾವ್ಯಕ್ಕೆ
ನನ್ನ ನಮನ

ಪದಗಳಲ್ಲಿ ನೆಲೆಸುತ್ತ ಕವಿಗಳನ್ನು ಯಾಮಾರಿಸುತ್ತ
ತನ್ನ ಲೋಕದಲ್ಲಿ ಕೊಂಡು ಹೋಗುವ
ಕವಿತೆಗೆ ನನ್ನ ನಮನ

ಪ್ರತಿಭೆ ಎಲ್ಲರ ಪಾಲಿಗೆ ಇದು ಕಾಮಧೇನು
ಜೇನಿನಂತೆ ಸವಿ ಇರುವ ಈ ಕಾವ್ಯ ವಿನೋದವೇನು
ಹೊಸ ಹೊಸ ಕಲ್ಪನೆಗಳನ್ನು ತಂದುಕೊಡುವ
ಈ ವರ್ಣನಾ ಪರಿಸರಕ್ಕೆ ನನ್ನ ನಮನ

ನನಗೆ ತಿಳಿದಿಲ್ಲ ಕಾವ್ಯ ಚತುರತೆಯು ಹೇಗಿದೆಯೆಂದು
ಸದ್ದಿಲ್ಲದೆ ಏನೋ ಬಂತು ಕಲ್ಪನೆಯ ಗಾಳಿ ನನ್ನಲ್ಲಿ ಸೇರಿತು
ಆ ರೀತಿಯಾದ ಕಲ್ಪನಾ ಲೋಕಕ್ಕೆ ನನ್ನನ್ನು ಕರೆದುಕೊಂಡು
ಹೋದ ಕಲ್ಪನೆಗೆ ಮನಸ್ಸಿಗೆ ನನ್ನ ನಮನ

17. ಅಗಣಿತ

ಅಗಣಿತ ಕಾವ್ಯ ಶಂಖಗಳು
ಎನ್ನ ಮನದಲ್ಲಿ ಹೇಳುತ್ತಿರಲು
ಕಲ್ಪನೆಯಲ್ಲಿ ತನ್ಮಯನಾಗಿ
ಕರುನಾಡ ಕುವರಿಯನ್ನು ವರ್ಣಿಸಿದೆ

ಹಿಂದೋಳಾದಿ ರಾಗಗಳು ನನ್ನ
ತನ್ವಿಯ ಕಂಠಕ್ಕೆ ಬಂದು
ಸೇರಲು ಅವಳ ರೂಪದಲ್ಲಿ
ತನ್ಮಯನಾಗಿ ಪಂಪ ರನ್ನರ
ಶೈಲಿಯಲ್ಲಿ ವರ್ಣಿಸಿದೆ

ಅರ್ಕಾದಿ ದೇವತೆಗಳ ವದನದ
ಕಾಂತಿಯನ್ನು ಪಡೆದು
ನನ್ನವರು ತಮ್ಮವರ ಮಂದಹಾಸಕ್ಕೆ
ಬರಹದಲ್ಲಿ ತನ್ಮಯನಾಗಿ
ಹರಿತ ತೇಜವನ್ನು ವರ್ಣಿಸಿದೆ.

18. ಅಮ್ಮ

ಅಮ್ಮ ನೀನು ಕೂಡ ಕವನಗಳ ಲಾಲಿ ಪದವನ್ನು
ನನಗೆ ಹಾಡಿರುವೆ ಮೋಹನ ರಾಗವೆಂಬ ಉಯ್ಯಾಲೆ
ಯನ್ನು ಕಟ್ಟಿ ವರ್ಣನೆಯ ಪದ ಹಾಡಿರುವೆ
ಕುಸುಮ ಷಟ್ಪದಿ ಎಂಬ ಚಾಮರವನ್ನ ಬೀಸುತ್ತ
ನನಗಾಗಿ ಜೋಗುಳವನ್ನು ಹಾಡಿರುವೆ
ನನ್ನ ಹಣೆಯ ಶೋಭೆಗಾಗಿ
ಚಂದಮಾಮನನ್ನೆ ತಿಲಕವಾಗಿ ಊಹಿಸಿರುವೆ
ನಿನ್ನ ಸುಮಧುರ ಕವಿತೆಗಳನ್ನು
ನನ್ನ ಮುಖಾರವಿಂದಕ್ಕೆ ಅಲಂಕಾರ ಮಾಡಿರುವೆ
ಅಮ್ಮ ನೀನು ಕೂಡ ಕವನಗಳ ಲಾಲಿ
ಪದ ನನಗೆ ಹಾಡಿರುವೆ



19. ಭಾವನೆಯ ಸಾಲು

ಸಂಗೀತ ಸ್ವರಗಳ ಭಾವನೆಯನ್ನು
ಅರ್ಥಮಾಡಿಕೊಳ್ಳುವೆ
ಆದರೆ ನಿನ್ನ ಮೌನದ ಭಾವನೆ
ತಿಳಿಯುತ್ತಿಲ್ಲ,
ಪ್ರಕೃತಿ ಪರಿಸರದ ಭಾವನೆಯನ್ನು
ತಿಳಿಯಬಲ್ಲೆ,
ಆದರೆ ನಿನ್ನ ಅಂತರಾಳದ ಭಾವನೆ ಮಾತ್ರ
ತಿಳಿಯಲಾರೆ,
ಕೋಗಿಲೆಗಳ ಗಾನದ ಏರಿಳಿತವನ್ನು
ತಿಳಿಯಬಲ್ಲೆ
ಆದರೆ ನಿನ್ನ ಮೆಲ್ಲನೆ ಬರುವ ಮಾತುಗಳನ್ನು
ತಿಳಿಯಲಾರೆ
ಹೇಳಿಬಿಡು ಗೆಳತಿ ನಿನ್ನ ಮನಸ್ಸು
ಮುಗ್ಧವೊ,
ಅಥವಾ ನಿನ್ನ ಅಂದ ಮಾತ್ರವೋ

20. ನಮ್ಮ ಭಾರತ

ಭಾರತ ದೇಶದೊಳ್ ತನ್ನ ಮಕ್ಕಳ ಸಾಹಸವನ್ನ
ಮೆಚ್ಚುವಳು ಭಾರತ ತಾಯಿ
ಸೈನಿಕ ಪಡೆಯೊಳ್ ಯೋಧರ ಯುದ್ಧಕ್ಕೆ
ಜೊತೆ ಇರುವವಳು ಭಾರತ ತಾಯಿ
ನೆನೆಯುವರು ಜನ ತಾಯಿಯನ್ನು ಮನದಲಿ
ಯುದ್ಧಕ್ಕೆ ಸಿದ್ಧವಾಗುವರು ಕಾರ್ಗಿಲ್‌ನಲ್ಲಿ

ಜನರ ರಕ್ಷಣೆಗಾಗಿ ಸದಾ ಯುದ್ಧವನ್ನು ಮಾಡುತ್ತ
ಸೈನಿಕರ ಸ್ನೇಹದಿಂದ ಇರುವರು ನಗುನಗುತ್ತ
ಪ್ರಾಣ ಹೋಗುತ್ತಿದ್ದರು ಹೇಳುವರು ಮಾತಿನಲಿ
ಜೈ ಭಾರತಾಂಬೆ ಎನ್ನುವರು ಕಾರ್ಗಿಲ್‌ನಲ್ಲಿ

ಮನೆಯಿಂದ ಸಂದೇಶ ಬರುವುದನ್ನು ಕಾಯುವರು
ತನ್ನ ತಂದೆ ತಾಯಿಯರ ಸಂದೇಶ ನೋಡಿ ನೊಂದವರು
ಈ ಯೋಧರ ನೋವಿನ ಕಷ್ಟ ಏನು ನುಡಿಯಲಿ
ನಮ್ಮ ರಕ್ಷಣೆಗಾಗಿ ಸದಾ ಯುದ್ಧ ಮಾಡುವರು ಕಾರ್ಗಿಲ್‌ನಲ್ಲಿ

ಭಾರತಾಂಬೆ ನಾ ಇನ್ನೊಂದು ಜನ್ಮದಲಿ
ನಾ ಬರುವೆ ಸೈನಿಕನಾಗಿ ನಿನ್ನ ಮಡಿಲಿನಲಿ
ನಾ ಇರುವೆ ಯೋಧರ ಜೊತೆಯಲಿ
ನಾ ಗುರುತಿಸಿಕೊಳ್ಳುವೆ ಯೋಧ ಎಂಬ ಹೆಸರಿನಲಿ

ಜೈ ಭಾರತಾಂಬೆ..

21. ಕವಿತೆ

ಯಾವ ಜನ್ಮದ ಮೈತ್ರಿಯೋ
ಕೂಡಿಬಂದಿದೆ ಕಾವ್ಯ ರಚನೆಯ ಭಾಗ್ಯವು

ಕಾವ್ಯ ಪ್ರತಿಭೆಯಲ್ಲಿ ನಾನು ಸಮರ್ಥನಲ್ಲ
ಆದರೂ, ರಚಿಸುವ ಆನಂದವನ್ನ ಕಳೆದುಕೊಳ್ಳಲಾರೆ

ಅನೇಕ ಕವಿಗಳ ಛಂದೋಬದ್ಧ ವಾಕ್ಯವೇ
ಸಾಧನೆಗೆ ನೀಡುವ ನನಗೆ ವರವು

ಕವಿಯಾಗುವ ಆಸೆ ನನಗಿಲ್ಲ
ಕಾವ್ಯ ರಚನೆಯಲ್ಲಿ ಆಗುವ ಸಂತಸವನ್ನ ನಾನು ಬಿಡುವುದಿಲ್ಲ.



22. ನಿರಪರಾಧಿ

ಕೌಸ್ತುಭ ಪ್ರಿಯೇ ನಾನು ನಿರಪರಾಧಿ
ಚಂದ್ರನ ತೇಜವನ್ನು ನಿನ್ನ ವದನಕ್ಕೆ
ವರ್ಣಿಸಿರುವಾಗ ಆ ಚಂದ್ರನಿಗೆ
ನಾ ನಿರಪರಾಧಿ

ಸುಗಂಧ ದ್ರವ್ಯವನ್ನು ನಿನ್ನ
ರೂಪ ಸಿರಿಗೇ ವರ್ಣಿಸಿರುವಾಗ
ಆ ಸುಗಂಧಗಳಿಗೆ
ನಾ ನಿರಪರಾಧಿ

ಚಿತ್ರಲೇಖನಕ್ಕಾಗಿ ಭಾವಕುಂಚದ
ಸಾಹಿತ್ಯವನ್ನ ನಿನಗಾಗಿ
ರಚಿಸುವಾಗ ಆ ಭಾವಕುಂಚಕ್ಕೆ
ನಾ ನಿರಪರಾಧಿ

ಬಾನಿನ ತಾರೆಗಳನ್ನು ನಿನ್ನ
ಹುಬ್ಬಿಗೇ ಚುಕ್ಕಿಗಳನ್ನಾಗಿ
ಶೃಂಗರಿಸಿದಾಗ ಆ ತಾರೆಗಳಿಗೆ
ನಾ ನಿರಪರಾಧಿ

ನಿನಗಾಗಿ ಸ್ವರ್ಣ ಅಕ್ಷರಗಳಿಂದ
ನಿನ್ನ ಅಂದವನ್ನು ಕಾವ್ಯದಲ್ಲಿ
ಬರೆಯುವಾಗ ನಿನಗೇ ಮಾತ್ರ
ನಾ ಯಾಕೆ ಅಪರಾಧಿ



23. ಅಂದಗಾತಿ

ಹೇ ಅಂದಗಾತಿ ನಾನು ವರ್ಣನೇ
ಮಾಡುವುದು ಎಲ್ಲಾ ಮಿಥ್ಯೆ

ನಿನ್ನ ಗೆಜ್ಜೆಗಳು ಸವೆದಿವೆ, ಅದಕ್ಕಾಗಿ
ಭರತನಾಟ್ಯದ ಗೆಜ್ಜೆಯನ್ನು ಕಲ್ಪಿಸಿರುವೆ
ಎನ್ನುವುದು ಮಿಥ್ಯೆ

ಆ ಕೈಯಲ್ಲಿರುವ ಶೋಭಿಸುವ ಉಂಗುರವನ್ನು
ಕೈಯಿಂದ ಜಾರಿ ಬಿದ್ದ ಉಂಗುರವೆಂದು
ನಿನಗೆ ವರ್ಣಿಸಿರುವೆ ಎನ್ನುವುದು ಮಿಥ್ಯೆ

ಆ ಮಿನುಗುವ ಮಂದಹಾಸವು
ನಂದ ಕಿಶೋರನ ನಗುವಿನ ಒಂದು
ಕಾಂತಿ ನಿನ್ನಲ್ಲಿ ಸೇರಿದೆ ಎಂದು ಹೇಳುವುದು ಮಿಥ್ಯೆ

ಆದರೆ ನನ್ನ ಕವನಲೋಕದಲ್ಲಿ ನಿನ್ನನ್ನು
ಮರೆಯಲಾಗದ ಸ್ನೇಹಿತೆ ಎಂದು ಬರೆದಿರುವುದು
ಮಾತ್ರ ಅಕ್ಷರಶಃ ಸತ್ಯ.

24. ಶುಕ ಪ್ರಿಯೇ

ಸಖಿಯೇ ಆ ಸುಧಾಂಶು ನಿನ್ನ
ಕಾಂತಿಯನ್ನು ಕದಿಯಲು ಪ್ರಯತ್ನಿಸಿದ ಆದರೆ
ನಾ ಅವನ ಕಾಂತಿಯನ್ನ ಕದ್ದು ನಿನಗೆ ವರ್ಣಿಸಿದೆ

ಆ ಸಪ್ತವರ್ಣಗಳು ನಿನ್ನ ಸುಂದರ ತಿಲಕದ ವರ್ಣವನ್ನ
ವಶಮಾಡಲು ಪ್ರಯತ್ನಿಸಿದರೂ ಆದರೆ ನಾ
ಆ ಸಪ್ತ ಬಣ್ಣಗಳನ್ನೆ ನಿನಗೇ ತಿಲಕವನ್ನಾಗಿ ವರ್ಣಿಸಿದೆ

ಆ ದೇವತೆಗಳು ನಿನ್ನ ಸೌಂದರ್ಯವನ್ನು ಕದಿಯಲು
ಪ್ರಯತ್ನಿಸಿದರು. ಆದರೆ ನಾ ಅವರ ಸೌಂದರ್ಯವನ್ನು
ಕದ್ದು ನಿನಗೆ ವರ್ಣಿಸಿದೆ.

ನನ್ನ ಮನಸ್ಸು ಕೂಡ ನಿನ್ನ ಚಂದದ ಸಿರಿಯನ್ನು
ದಕ್ಕಿಸಿಕೊಳ್ಳಲು ಪ್ರಯತ್ನಿಸಿತು ಆದರೆ ನಿನ್ನ
ಮನವು ಮೊದಲೇ ನನ್ನ ಮನದಲ್ಲಿ ಬಂದು
ಸೇರಿದೆ.

25. ಗೆಳೆಯ

ಗೆಳೆಯ ನಿನ್ನ ಹೃದಯವೆಂಬ ಪುಷ್ಪಗಳಿಗೆ
ದುಂಬಿಯಾಗಿ ಸುತ್ತುವೆ

ಸದಾ ನಿನ್ನ ಸ್ನೇಹ ಎಂಬ ತೈಲಕ್ಕೆ
ದೀಪದಂತೆ ಜೊತೆಗಿರುವೆ

ಮಿತ್ರ ನಿನ್ನ ಸಹನೆ ಎಂಬ ಅರಮನೆಗೆ
ನಾ ಸೇವಕನಂತೆ ಬಳಿಯಿರುವೆ.

ಸದಾ ಮಿಂಚುವ ನಿನ್ನ ಪ್ರೀತಿಗೆ
ನಾ ಅಭಿಮಾನಿಯಾಗಿರುವೆ.

26. ಚಂಪಕ ಪುಷ್ಪ ಸಖಿ



ಚಂಪಕಪುಷ್ಪಸಖಿಯೇ ನಿನ್ನ
ಕೋಮಲ ಕಪೋಲವ ಆ ಬರ್ಹಿಯು
ಸ್ಪರ್ಶಿಸುವ ನೆಪದಿಂದ
ನಿನಗೆ ಚಾಮರ ಬೀಸುತ್ತಿದೆ !!

ನಿನ್ನ ರಮಣೀಯವಾದ ತೇಜಸ್ಸಿಗೆ
ಆ ಮುಕ್ತಾವಳಿಯು ಕಂಠಕ್ಕೆ
ಹಾರಾವಾಗುವ ನೆಪದಿಂದ
ನಿನಗೆ ಚಾಮರ ಬೀಸುತ್ತಿದೆ !!

ಆ ಆಕರ್ಷಕ ನಾಸಿಕಕ್ಕೆ
ಸ್ವರ್ಣ ಮೂರ್ತಿಗಳು
ಗಾಡಿ ಮೂಗುತಿಯ ನೆಪದಿಂದ
ನಿನಗೆ ಚಾಮರ ಬೀಸುತ್ತಿದೆ !!

ನಿನ್ನ ಸುಂದರ ಕರ್ಣಕ್ಕೆ
ಆ ಶಂಖಪುಷ್ಪಗಳು ಜುಮಕಿಗಳಾಗುವ
ನೆಪದಿಂದ ನಿನಗೆ
ಚಾಮರ ಬೀಸುತ್ತಿದೆ !!

ನಿನ್ನ ಚೆಂದದ ದ್ಯುತಿಗೆ
ಆ ನಕ್ಷತ್ರವು ಹೊಳಪಾಗುವ
ನೆಪದಿಂದ ನಿನಗೆ
ಚಾಮರ ಬೀಸುತ್ತಿದೆ !!

27. ದಿನವಿಡೀ

ತರುಣಿ ನಿನ್ನ ಬೈತಲೆಯ
ಶಿಪಿಗೆ ರಾರಾಜಿಸಬೇಕೆಂದು
ಶಾಂತಲೆಯ ಲಲಾಮವು
ಕಾಯುತ್ತಿದ್ದರು ದಿನವಿಡೀ !!

ನಿನ್ನ ಕಟಿಯ ಸಿಂಗರಿಸಲು
ವಿಯತ್ತಳದಲ್ಲಿರುವ
ನೀಳವಾದ ಶತಪ್ರದವು
ಕಾಯುತ್ತಿದ್ದರು ದಿನವಿಡೀ !!

ನಿನ್ನ ಆನಂದದ ವಾದವನ್ನು
ತನ್ನಲ್ಲಿ ಬರಮಾಡಲು
ಷಡ್ಜಸ್ವರದ ಶಿಖಿಯು
ಕಾಯುತ್ತಿದ್ದರು ದಿನವಿಡೀ !!

ನಿನ್ನ ನಯನವ ವರ್ಣಿಸಿ
ರಚಿಸಲೊಂದು ಕಾವ್ಯವನು
ಪುರಾತನ ಕಬ್ಬಿಗರು
ಕಾಯುತ್ತಿದ್ದರು ದಿನವಿಡೀ !!

28. ಗರವಟಿಗ

ಸಖಿಯೇ ! ನಾ ಗರವಟಿಗ !
ನಿನ್ನ ರೂಪ ಲಾವಣ್ಯವನ್ನು
ಆ ರುಕ್ಮಿಣಿಯು ಕದಿಯಬಹುದು
ತನ್ನ ಮುಕುಂದ ಚೆಂದ ಕಾಣಲು
ಅದಕ್ಕಾಗಿ ನಾ ಗರವಟಿಗ !!

ನಿನ್ನ ಸೊಗಸಿನ ಅಂಬಕದ
ಸೌಂದರ್ಯವನ್ನ ಆ ಮಹೋತ್ಸವವು
ಕದಿಯಬಹುದು ಅದಕ್ಕಾಗಿ
ನಾನು ಗರವಟಿಗ !!

ಆ ಗೋಪಿಯರು ಗೋಪಾಲಕನ
ವೈಭವವನ್ನು ನೋಡಿ ನಾಚುವುದಕ್ಕೆ
ನಿನ್ನ ಲಜ್ಜೆಯನ್ನು ಕದಿಯಬಹುದು
ಅದಕ್ಕಾಗಿ ನಾ ಗರವಟಿಗ !!

ನಿನ್ನ ರೇಶ್ಮೆ ಸೀರೆಯ
ಹಸಿರಿನ ಚೆಂದವನ್ನು ಆ
ತುಳಸಿ ವರ್ಣವು ಕದಿಯಬಹುದು
ಅದಕ್ಕಾಗಿ ನಾ ಗರವಟಿಗ !!

29. ಜಡೆ ಕವನ

ಹರಿತಪರ್ಣಗಳ ಮೇಲೆ ಮೇಘಪುಷ್ಪದ ನರ್ತನ
ನರ್ತನ ಕಂಡು ವಿಸ್ಮಿತನಾದಾಗ ರಚಿಸಿದೆ ಕವನ
ಕವನದ ಸಿತಾಂಭೋಜವನ್ನು ಅರಳಿಸಲು ತರುಣಿ
ಆ ತರುಣಿ ಶಿಪಿಯಂತೆ ಬಂದಳು ಪ್ರಕೃತಿಯಲ್ಲಿ !!

ಪ್ರಕೃತಿಯ ಜ್ವಲಿತವು ನನ್ನನ್ನು ಮೈಮರೆಸಿತು
ಮೈ ಮರೆತೆ ಅವಳ ಕಂಗಳ ಚಂದ್ರಿಕೆಯ ಆಸ್ವಾದಿಸಿ
ಆಸ್ವಾದಿಸು ಪ್ರಿಯೇ ನನ್ನ ಸುಪ್ರಲಾಪದ
ಕಾಂತಿಯನ್ನು ವರ್ಣಿಸಿರುವೆ !!

ವರ್ಣಿಸಿರುವೆ ನಿನ್ನ ಬೈ ತಲೆಯ ನಿಸ್ವಾನವು
ಮೃಂಗಾಕನನ್ನು ಕರೆದಾಗ
ಕರೆದಾಗ ನಿನ್ನ ಕರ್ಣಲೋಲಕದ
ಸೌಂದರ್ಯ ಖದ್ಯೋತನನ್ನು !!

ಖದ್ಯೋತನ ನಿನ್ನನ್ನು ಅರಗಿಣಿ ಎಂದು ಕೂಗಿದನು
ಕೂಗಿ ಹಾಡಿದವು ನಿನಗಾಗಿ
ಮಯೂರಗಳು ಷಡ್ಜ ಸ್ವರದಲ್ಲಿ
ಸ್ವರಗಳ ನಿಯಮಕ್ಕೆ ನೀ ಹೇಳಿದೆ ಸಂಗೀತ !!

ಸಂಗೀತವನ್ನು ನಿನ್ನ ಮಧುರ ಧ್ವನಿಯಿಂದ ಹಾಡಿದೆ
ಹಾಡಿದಾಗ ನಾ ತನ್ಮಯನಾದೆ
ತನ್ಮಯನಾಗಿ ನಿನ್ನ ಬಗ್ಗೆ ಕಲ್ಪಿಸಿದೆ ಸಾಹಿತ್ಯ
ಸಾಹಿತ್ಯವನ್ನು ಬರೆದೆ ಆ ಹರಿತ ಪರ್ಣದಲ್ಲಿ !!

30. ಸಾಹಿತ್ಯ ಪ್ರಕಾರಗಳು

20. !! ಛಂದಸ್ಸು ಶರ ಷಟ್ಪದಿ !!

ಅಂಬರ ಶಾಸನವು
ಅಂಬರ ನಯನವು
ಅಂಬುಧಿ ನಲೆಯು ನೀ ಚೆಲುವೆ
ಅಂಬುಜ ಗೆಳತಿಯ
ಅಂಬಕ ನಿನದವ
ತುಂಬಿದೆ ಸಂತಸ ತಿಳಿ ಚೆಲುವೇ !!

21. !! ರುಬಾಯಿ !!

ಕಾರ್ತಿಕ ದೀಪವನ್ನು ಹಿಡಿದಳು
ಕರುನಾಡ ಕುವರಿ ಬಂದಳು
ಅವಳ ಮುಖಾರವಿಂದದ ಕಾಂತಿಯಿಂದ
ದಿನಮಣಿನನ್ನೆ ಕವಿಯಾಗಿಸಿದಳು !!

31. ಟಂಕಾ ಪರ್ಷಿಯನ್ ಸಾಹಿತ್ಯ

ಜೈವಾತೃಕನ
ಕೌಮುದಿ ನೀನು ತನ್ವಿ
ಆ ರೂಪವನ್ನ
ಮೈ ಮರೆತು ಅದನು
ಶಂಖಪಾಲನು ಕವಿ !!

23. ಸಂಪಾ ಸಾಹಿತ್ಯ

ತರುಣಿ ನಿನ್ನ ಸುಮಧುರ
ಮಂದಹಾಸವನ್ನು ಆಸ್ವಾದಿಸಬೇಕೆಂದು
ಶತಹ್ರದವು ಶತಪತ್ರವು
ಮಾಡುತ್ತಿದೆ ಸಮರ !!

24. !! ಜೋಡುನುಡಿ !!

ನಿನ್ನ ರೂಪ–ಗೀಪ ಚೆಂದ–ಗಿಂದವ,
ನನ್ನ ಮನ–ಗಿನದಿ ಆನಂದಿಸಿ ಆಸ್ವಾದಿಸಿ,
ಕವನ–ಗಿವನವ ಗೀಚುತಿರುವೆ !!



32. ನವ್ಯ ಬರಹಗಾರ

ಕಲ್ಪವೃಕ್ಷದಿಂದ ವರ್ಣಗಳ ಪಡೆದು
ಬರ್ಹಿಯ ಗರಿಲೇಖನವ ಪಿಡಿದು,
ಸಜ್ಜನರ ಮನಮಾಣಿಕ್ಯವನು
ವರ್ಣಿಸುತ್ತ ಆದೆ ನಾ ಬರಹಗಾರ !!

ರಾಘವನ ರಾಜ್ಯದಲ್ಲಿ ನಾನಿಂದು
ಖಗವಾಹನನ ಕಾಂತಿಯನ್ನು ಪೇಳ್ದು
ಧರಿತ್ರಿಯ ಮಡಿಲಿನಲ್ಲಿ
ಕರುನಾಡ ಕುವರಿಯನ್ನು ವರ್ಣಿಸುತ್ತಾ
ಆದೆ ನಾ ಬರಹಗಾರ !!

ಕಾವ್ಯ ಕುಸುಮದ ವಿತ್ತವನ್ನು ಪ್ರೇಮಿ
ಛಂದಸ್ಸಿನ ಆಭರಣವನ್ನು ಕೇಳಿ
ಶತಮಾನದ ಕಬ್ಬಿಗರ ಶೈಲಿಯಲ್ಲಿ
ತರುಣಿಯರನ್ನು ವರ್ಣಿಸುತ್ತಾ
ಆದೆ ನಾ ಬರಹಗಾರ ನವ್ಯ ಬರಹಗಾರ



33. ಶಿಶುಗೀತೆ

ಅಲ್ಲಿ ನೋಡು ಚಂದಮಾಮ
ಇಲ್ಲಿ ನಗುವನು ಪುಟ್ಟ ಕಂದಮ್ಮ
ಮೆಲ್ಲ ಮೆಲ್ಲನೆ ಹೆಜ್ಜೆಯ ಇಡುತ್ತ ಬಂದನು
ಬೆಣ್ಣೆಯಂತೆ ಮೃದು ಕೆನ್ನೆಯವನು

ನಗುವಿನಲ್ಲಿದೆ ಮಧುರ ಸಕ್ಕರೆ
ಮೃದು ಮಾತಿನಲ್ಲಿದೆ ಅಕ್ಕರೆ
ಕೃಷ್ಣನಂತೆ ಓಡಿ ಬರಲು
ಎಲ್ಲರ ಮನಕೆ ಸಂತಸ ತರಲು !!

ಹೇಳುವನು ತೊದಲ ನುಡಿ
ಕಂದನ ಮುಖವು ಸುಂದರ ಗುಡಿ
ಅಂಬೆಗಾಲಿಡುತ ಬರಲು
ಗುಲಾಬಿ ಹೂವುಗಳನ್ನು ಅರಳಿಸಲು !!

ಕಂದನ ತುಂಟಾಟ ನೋಡಿ
ಬಂದವು ಆಡಲು ಗೊಂಬೆಗಳ ಜೋಡಿ
ಅಮ್ಮ ಎಂದನು ಮುದ್ದು ವಾಕ್ಯದಿಂದ
ಹಾಡಿದಳು ತಾಯಿ ಲಾಲಿ ಹಾಡು ಮಮತೆಯಿಂದ.

34. ಕೃಷ್ಣಮಂದಿರ

ನಮ್ಮ ಹಳ್ಳಿ ಪರಿಸರ
ಹಚ್ಚ ಹಸಿರು ಸುಂದರ
ಅಲ್ಲಿ ಇದೆ ಕೃಷ್ಣಮಂದಿರ
ಹಳ್ಳಿ ನೋಡಲು ಬಂದನು ಚಂದಿರ !!

ಹಳ್ಳಿಯಲ್ಲಿ ಮಾವಿನ ಮರ
ಮಾವಿನ ಹಣ್ಣು ಬಹಳ ಮಧುರ
ಅದನ್ನು ತಿನ್ನಲು ನಮಗೆ ಕಾತುರ
ಹಳ್ಳಿಯ ಹೆಸರೇ ಅಮ್ರಪುರ !!

ಅಲ್ಲಿ ಇದ್ದ ಒಬ್ಬ ನಾಯಕ
ಅವನ ಕಣ್ಣಲ್ಲಿ ಇತ್ತು ಕನ್ನಡಕ
ಅವನು ತುಂಬಾ ಸಿಡುಕ
ಮಾವಿನ ಹಣ್ಣಿಗೆ ಸದಾ ರಕ್ಷಕ



35. ಪರಿಸರ

ಹಸಿರಿನ ಎಲೆಗಳ ಮೇಲೆ ಹನಿಗಳ ಕವನ ವಾಚನ
ಪ್ರಕೃತಿಯ ಮಡಿಲಿನಲ್ಲಿ ಕೋಗಿಲೆಗಳ ಗಾಯನ
ಮಲ್ಲಿಗೆ ಕುಸುಮದ ಗೃಹದಲಿ ದುಂಬಿಗಳ ಭಾಷಣ
ಮನದಾಳದಿಂದ ಹೇಳುವೆ ಹೇ ಪರಿಸರ
ನಿನಗೆ ಸ್ವಾಗತದ ಕವನ !!

ಅರಳಿದ ಪುಷ್ಪದ ಸೀರೆಯನ್ನು ಧರಿಸುತ್ತ
ನಲಿಯುತ್ತ ಬಂದಳು ಕರುನಾಡ ಕುವರಿ ಕಾವೇರಿ
ಹರಿತ ಪರ್ಣಗಳ ಮುಂಗುರುಳ ತೀಡುತ್ತ
ಗಂಧೋದಕ ಚಿಮುಕಿಸಿ ರಾಜಕುಮಾರಿ !!

ನವಿಲುಗಳು ಆರಂಭಿಸಿವೆ ನೃತ್ಯ ಶಾಲೆಯ
ಶುಕಗಳು ಆರಂಭಿಸಿವೆ ಹಸಿರ ಕಾಂತಿಯ ಶಾಲೆಯ
ಬಣ್ಣ ಬಣ್ಣದ ಚಿಟ್ಟೆಗಳು ಪ್ರಾರಂಭಿಸಿವೆ ಹಾರುವ
ಸ್ಪರ್ಧೆಯ ಪಾರಿವಾಳಗಳು ಹಾಡುತಿವೆ ಪರಿಸರದ ಕಾವ್ಯವನ್ನ !!

36. ಭಾರತ ನೋಡಮ್ಮ



ಭಾರತ ನೋಡಮ್ಮ ನಮ್ಮ ಭಾರತ ನೋಡಮ್ಮ
ಭಾರತ ಮಡಿಲಿನಲ್ಲಿ ಇರುವ ನಾವೇ ಧನ್ಯರಮ್ಮ
ಬಣ್ಣ ನೋಡಮ್ಮ ಸತ್ಯ
ಅಹಿಂಸೆ ಏಕತೆಯ ಬಣ್ಣ ನೋಡಮ್ಮ
ಯೋಧರು ವಂದೇ ಮಾತರಂ ಎನ್ನುವ
ಇಂಚರ ಆಲಿಸಮ್ಮಾ !!

ಬಾವುಟ ನೋಡಮ್ಮ ನಮ್ಮ ಬಾವುಟ ನೋಡಮ್ಮ
ದೇಶದ ಹಿತಕೆ ದುಡಿಯುವ ಸಜ್ಜನರ ನೋಡಮ್ಮ
ಪರಿಸರ ನೋಡಮ್ಮ ಹರಿತ ಪರ್ಣಗಳ ನೋಡಮ್ಮ
ವಂದೇ ಮಾತರಂ ಎನ್ನುವ
ವನ್ಯ ಮೃಗಗಳ ನಿನಾದವನ್ನ ಆಲಿಸಮ್ಮ !!

ಬಾಪು ನೋಡಮ್ಮ ನಮ್ಮ ಬಾಪು ನೋಡಮ್ಮ
ಆಂಗ್ಲರ ಸೋಲಿಸಿ ಸ್ವಾತಂತ್ರ್ಯ ತೋರಿಸಿದ
ನಮ್ಮ ಕಲ್ಪವೃಕ್ಷ ನೋಡಮ್ಮ
ಕೌಮುದಿ ನೋಡಮ್ಮ
ದೇಶಭಕ್ತಿಯ ಕೌಮುದಿ ನೋಡಮ್ಮ
ವಂದೇ ಮಾತರಂ ಎನ್ನುವ ಕ್ರಾಂತಿ ವೀರರ
ನಿಸ್ವಾನ ಆಲಿಸಮ್ಮ !!

ಸಂಸ್ಕೃತಿ ನೋಡಮ್ಮ ನಮ್ಮ ಸಂಸ್ಕೃತಿ ನೋಡಮ್ಮ
ಆಚರಿಸುವ ಸಂಪ್ರದಾಯದ ವೈಭವ ನೋಡಮ್ಮ
ಕಬ್ಬಿಗರ ನೋಡಮ್ಮ ನಮ್ಮ ಕಬ್ಬಿಗರ ನೋಡಮ್ಮ
ಮನುಜರ ಹೃದಯ ಪುಲಕಿತಗೊಳಿಸುವ
ವಂದೇ ಮಾತರಂ ಎಂಬ ಕಾವ್ಯವನ್ನು ಆಲಿಸಮ್ಮ !!



37. ಅಂಬುಜಪ್ರಿಯೇ

ಅಂಬುಜಪ್ರಿಯೇ ನಿನ್ನ
ಸುಂದರ ವೇಣಿಯನ್ನು
ಶಾರದೆಯ ಕೇಶವೆಂದು
ಭಾವಿಸಿ ವೇಣಿಪಟ್ಟಿಯಾಗಿದೆ !!

ನಿನ್ನ ಕಾಂತಿಯ ಹಾಲ್ಗೆನ್ನೆಯನ್ನು
ಆ ಗೋವಿನ ಕರು
ನವನೀತಚೋರನ ಕೆನ್ನೆ ಎಂದು
ಭಾವಿಸಿ ಮುತ್ತು ನೀಡಿದೆ !!

ನಿನ್ನ ಅಂದದ ಪಾದವನ್ನು
ಆ ಚಿಟ್ಟೆಯು ಭಾಮೆಯ
ಪಾದವೆಂದು ಭಾವಿಸಿ
ಪಾದಕ್ಕೆ ಪಾರಾಣಿಯ ಚಿತ್ರವಾಗಿದೆ !!

ನಿನ್ನ ಕೋಮಲ ಹಸ್ತವನ್ನು
ಆ ಶಶವು ಪರಿಸರವೆಂದು
ಭಾವಿಸಿ ಆಟವಾಡಿದೆ

ಅಷ್ಟು ಶೋಭಿಸುವವರೇ
ನಿನ್ನ ಅಂದವನ್ನು ಹೆಚ್ಚಿಸುತ್ತಿರಲು
ಮತ್ತೇಕೆ ನನ್ನ ವರ್ಣನೆ

38. ನಾಗವಲ್ಲಿ ಪ್ರಿಯೇ



ನಾಗವಲ್ಲಿ ಪ್ರಿಯೇ ನೀನು ಹಿಡಿದ
ದರ್ಪಣಕ್ಕೆ ಮುಪ್ಪಾಗಿದೆ ಅದಕ್ಕಾಗಿ
ಆಗಸದ ದರ್ಪಣವನ್ನು ವರ್ಣಿಸಿರುವೆ
ಅನುಮತಿ ನೀಡುವೆಯಾ !!

ನೀನು ನಡೆದಾಡುವಾಗ ನಿನ್ನ ಕಾಲಿನ
ಗೆಜ್ಜೆಯ ನಿನಾದ ಕಡಿಮೆ ಆಗಿದೆ
ಅದಕ್ಕಾಗಿ ಚಿಲಿಪಿಲಿ ಹಕ್ಕಿಗಳ
ಇಂಚರವನ್ನು ಕಲ್ಪನೆ ಮಾಡಿರುವೆ
ಅನುಮತಿ ನೀಡುವೆಯ !!

ನೀನು ಹಚ್ಚಿರುವ ಲಾಕ್ಷಾರಸದ
ಕೆಂಬಣ್ಣ ಕಡಿಮೆ ಆಗಿದೆ
ಅದಕ್ಕಾಗಿ ಪಾತರಗಿತ್ತಿಯ ಕೆಂಪುಬಣ್ಣವನ
ನಿನಗಾಗಿ ಕಲ್ಪಿಸುತ್ತಿರುವೆ
ಅನುಮತಿ ನೀಡುವೆಯ !!

ನಿನ್ನ ಬೈತಲೆಯ ಆಭರಣವು
ಜಾರಿಬಿದ್ದಿದ್ದೆ ಅದಕ್ಕಾಗಿ
ಹರಿಪ್ರಿಯೆಯ ಸಿಂಧೂರ ಸರಣಿಯ
ಕಲ್ಪನೆ ಮಾಡಿರುವೆ
ಅನುಮತಿ ನೀಡುವೆಯ !!

ನನಗೆ ಕಾವ್ಯದ ಅಭಿರುಚಿ ಕಡಿಮೆ
ಆಗಿದೆ ಅದಕ್ಕಾಗಿ ನಿನ್ನ ಸೌಂದರ್ಯದ
ವರ್ಣನೆಯನ್ನು ನವ್ಯ ಕವಿ ಕವಯಿತ್ರಿಯರ
ಕಲ್ಪನೆಗೆ ಆಹ್ವಾನ ನೀಡಿದ್ದೇನೆ
ಅನುಮತಿ ನೀಡುವೆಯ

39. ನಯನದ ನೂಪುರ

ಸಖಿಯೇ ನಿನ್ನ ಅಂದದ ರಶ್ಮಿಗೆ
ಅಂಚೆಯನ್ನು ವರ್ಣಿಸಿಲ್ಲವೆಂದು
ಅಂಚೆಯ ನಯನದ
ನೂಪುರ ಮುನಿಸಿದೆ !!

ಆ ಲಾವಣ್ಯ ಪ್ರಕಾಶವನ್ನು
ನಿನ್ನ ಕಾಂತಿಗೆ
ವರ್ಣಿಸಿಲ್ಲವೆಂದು ತಿಂಗಳ
ನಯನದ ನೂಪುರ ಮುನಿಸಿದೆ !!

ನಿನ್ನಯ ನೂಪೂರದ ನಾದವನ್ನು ವೀಕ್ಷಿಸಲು
ಅವಕಾಶ ನೀಡಿಲ್ಲವೆಂದು
ಮಯೂರ ನಯನದ
ನೂಪುರ ಮುನಿಸಿದೆ !!

ನಿನ್ನ ಸೌಂದರ್ಯ ವರ್ಣನೆಯನ್ನು
ಪುಸ್ತಕದಲ್ಲಿ ರಚಿಸಿಲ್ಲವೆಂದು
ನನ್ನ ಲೇಖನಿಯ
ನಯನದ ನೂಪುರ ಮುನಿಸಿದೆ !!

40. ಬೀಳ್ಕೊಡುಗೆ

ಬಕುಳಪುಷ್ಪ ಸಖಿ ನಿನ್ನ ತ್ವಚೆಯ
ಕಾಂತಿಗೆ
ಅಲಂಕಾರ ಆಗಿರುವಾಗ ಆ ಇಂದುವಿಗೆ
ಇಂದು ಬೀಳ್ಕೊಡುಗೆ !!

ನಿನ್ನ ನಯನದ ರೆಪ್ಪೆಗೆ
ಶೋಭಿಸಿದ ಆ
ಮಯೂರ ಗರಿಗೆ
ಇಂದು ಬೀಳ್ಕೊಡುಗೆ !!

ನಿನ್ನ ಕೇಶವನ್ನು
ಹಸಿರೆಲೆ ಎಂದು ಭಾವಿಸಿ
ಸುತ್ತ ತಿರುಗುವ ಆ ಚಿಟ್ಟೆಗೆ
ಇಂದು ಬೀಳ್ಕೊಡುಗೆ !!

ನಿನ್ನ ಸೌಂದರ್ಯಕ್ಕೆ ಕಲ್ಪಿಸಲ್ಪಡುವ
ಆಗುವ ಸುಗಂಧ
ದ್ರವ್ಯಗಳಿಗೆ
ಇಂದು ಬೀಳ್ಕೊಡುಗೆ !!

ಪ್ರತಿ ನಿತ್ಯ ನಿನಗಾಗಿ ನಿನ್ನ ಅಂದವನ್ನು
ಕಾವ್ಯದಲ್ಲಿ ಬಣ್ಣಿಸಿ ರಚಿಸುವ
ನನ್ನ ಲೇಖನ-ಬರಹಗಳಿಗೆ
ಇಂದು ಬೀಳ್ಕೊಡುಗೆ !!

41. ಅಮ್ಮ



ಅಮ್ಮ ನೀನು ಸಹ ಕವನಗಳ
ಲಾಲಿ ಪದವನ್ನು ನನಗೆ ಹಾಡಿರುವೆ
ಮೋಹನ ರಾಗವೆಂಬ ಉಯ್ಯಾಲೆಯನ್ನು
ಕಟ್ಟಿ ಕಾವ್ಯದಿಂದ ತೂಗಿರುವೆ !!

ಅಮ್ಮ ನೀನು ಸಹ ಕುಸುಮ ಷಟ್ಪದಿ
ಎಂಬ ಚಾಮರವನ್ನು ಬೀಸುತ್ತ
ನನಗಾಗಿ ಸುಂದರ
ಜೋಗುಳ ಹಾಡಿರುವೆ !!

ನನ್ನ ಹಣೆಯ ಶೋಭೆಗಾಗಿ
ಚಂದಮಾಮನನ್ನೇ
ತಿಲಕವನ್ನಾಗಿ
ಊಹಿಸಿರುವೆ !!

ನಿನ್ನ ಸುಮಧುರ
ಹಾಡಿನ ಪಾರಿವಾಳವನ್ನು
ನನ್ನ ಮನಸ್ಸಿನ ಆಗಸಕ್ಕೆ
ಹಾರಿಸಿರುವೆ.

42. ಪೂರ್ಣಚಂದ್ರ



ಹೇ ಪೂರ್ಣಚಂದ್ರ
ನಿನ್ನ ಪೂರ್ಣತೆಯನ್ನು
ಅರ್ಥ ಮಾಡಬೇಡ ಏಕೆಂದರೆ ನಿನ್ನನ್ನು
ನನ್ನ ಸಖಿಯ ನಯನಕ್ಕೆ ವರ್ಣಿಸಿರುವೆ !!

ತುಳಸಿ ದಳವೇ ನಿನ್ನ ಸುಮಧುರ
ಪರಿಮಳವನ್ನು ನಿಲ್ಲಿಸಬೇಡ
ಏಕೆಂದರೆ ನಿನ್ನ ಪರಿಮಳವನ್ನು
ನನ್ನ ಸಖಿಯ ಮುಗ್ಧತೆಗೆ ವರ್ಣಿಸಿರುವೆ !!

ಹೇ ಅಂಚೆಯೇ ನಿನ್ನ ಶ್ವೇತ
ವರ್ಣವನ್ನು ಕಡಿಮೆ ಮಾಡಬೇಡ
ಏಕೆಂದರೆ ನಿನ್ನ ಅಂದವನ್ನು ನನ್ನ ಗೆಳತಿಯ
ಮುಖಾರವಿಂದಕ್ಕೆ ವರ್ಣಿಸಿರುವೆ !!

ಹೇ ಹಸ್ಮುಖಿ ನಿನ್ನ ಕಾಂತಿಯನ್ನು
ಬಾಡಿಸಬೇಡ ನಿನ್ನ ಸೌಂದರ್ಯ
ಕಲ್ಪನೆಯನ್ನು ಸಾಹಿತ್ಯದಲ್ಲಿ
ವರ್ಣಿಸಿರುವೆ !!



43. ಸಹೋದರಿ

ಸಹೋದರಿ
ನಿನ್ನ ನೂಪುರದ
ಇಂಚರದಿಂದ ಬದಾಮಿ
ಶಿಲ್ಪಗಳಿಗೆ ಜೀವ ಬಂದಂತಾಯಿತು !!

ನಿನ್ನ ಸುಂದರ ಮನದಿಂದ
ಹಂಪೆಯ ವೈಭವವು
ಇನ್ನೂ ಶೋಭಿಸಿದೆ !!

ನೀನು ಮಾತಾಡುವಾಗ ಬರುವ
ಇಂಪಾದ ಧ್ವನಿಯಿಂದ
ಕೋಗಿಲೆಗಳೇ ನಿನ್ನ ಬಳಿಗೆ
ಸಂಗೀತ ಕಲಿಯಲು ಬಂದಿವೆ

ನಿನ್ನ ಪ್ರೀತಿಯಿಂದ
ನನಗೆ ತಿಳಿಯದೇ
ಸಂತಸದ ರೆಕ್ಕೆಗಳು ಬಂದಿವೆ !!

ಪ್ರತಿ ಸಲ ಗೆಳತಿಗಾಗಿ
ರಚಿಸುವ ಕವಿತೆ
ಇಂದು ನಿನಗಾಗಿ ರಚಿಸಿರುವೆ !!



44. ಕುವೆಂಪು

ಕುವೆಂಪುರವರೇ ನಿಮ್ಮ ಮುಗ್ಧ
ಮನಸನ್ನು ಆ ಜಿಂಕೆಯು
ಕದಿಯಬಹುದು ಅದಕ್ಕಾಗಿ
ನಾ ಕಾವಲುಗಾರ !!

ನಿಮ್ಮ ವರ್ಚಸ್ಸನ್ನು ಆ ದೇವೇಂದ್ರನು
ಕದಿಯಬಹುದು ಅದಕ್ಕಾಗಿ
ನಾ ಕಾವಲುಗಾರ !!

ರಮಣೀಯ ಮಾತುಗಳನ್ನು
ವಾಣಿಯು ಕದಿಯಬಹುದು
ಅದಕ್ಕಾಗಿ ನಾ ಕಾವಲುಗಾರ !!

ನಿಮ್ಮ ಸುಂದರ ಕವಿತೆಗಳನ್ನು
ಆ ನಿಶಾಕರನು ತನ್ನ ಕಾಂತೆಗೆ
ವರ್ಣಿಸಲು ಕದಿಯಬಹುದು
ಅದಕ್ಕಾಗಿ ನಾ ಕಾವಲುಗಾರ !!

ಸದಾ ಪ್ರಕಾಶಿಸುವ ನಿಮ್ಮ
ಕಾವ್ಯ ವಿಚಾರವನ್ನು ಆ ಕಾಳಿದಾಸನೆ
ಕಲಿಯಬಹುದು ಅದಕ್ಕಾಗಿ ನಾ ಕಾವಲುಗಾರ !!



45. ಶ್ವೇತಪುಷ್ಪ ಸಖಿ

ಶ್ವೇತಪುಷ್ಪಸಖಿ ನಿನ್ನ ರೂಪಲಾವಣ್ಯದ
ಕಾಂತಿಗೆ ಮಿನುಗು ಆಗುವ
ಆ ಮಿಂಚುಹುಳುವಿಗೆ
ನಾ ಹೇಳುವೆ ಧನ್ಯವಾದ !!

ನಿನ್ನ ಕರ್ಣಕ್ಕೆ
ಆಭರಣವಾಗುವ
ಆ ಚಿಂತಾಮಣಿಗೆ
ನಾ ಹೇಳುವೆ ಧನ್ಯವಾದ !!

ನಿನ್ನ ಮುಂಗುರುಳನ್ನು
ಸುಂದರವಾಗಿ ಅಲಂಕಾರ
ಮಾಡುವ ಆ ವಾಯುವಿಗೆ
ನಾ ಹೇಳುವೆ ಧನ್ಯವಾದ !!

ನಿನ್ನ ಕುಡಿ ನೋಟವನ್ನು
ವರ್ಣಿಸುವ ನವ್ಯ
ಕಬ್ಬಿಗರಿಗೆ ನಾ
ಹೇಳುವೆ ಧನ್ಯವಾದ !!

46. ಸುಂದರ ವಜ್ರ

ಸಹೋದರಿ ನಿನ್ನ ಮಂದಹಾಸದ
ಬೆಳಕು ಆ ಗೋವರ್ಧನ ದಾರಿಗೆ
ನವಿಲುಗರಿ ಆಗಿರುವಾಗ
ಮತ್ತೇಕೆ ಮುನಿಸು !!

ನಿನ್ನ ಕಾಲಿನ ನೇವರೆಯ ಹೊಳಪು
ಆ ಸುಂದರ ವಜ್ರಗಳಿಗೆ
ಕಾಂತಿಯಾಗಿರುವಾಗ
ಮತ್ತೇಕೆ ಅಲಂಕಾರ ವಸ್ತುಗಳು !!

ನಿನ್ನ ತುಂಟಾಟದ ವೈಭವವೇ
ಆ ಪಿಕಗಳಿಗೇ ಇಷ್ಟವಾದಾಗ
ಮತ್ತೇಕೆ ಮೌನ !!

ನಿನ್ನ ಮುದ್ದಾದ ಪ್ರೀತಿಯೇ
ಈ ಅಣ್ಣನಿಗೆ
ಕಾವ್ಯ ರಚಿಸುವುದಕ್ಕೆ ಪ್ರೋತ್ಸಾಹವಾಗಿರುವಾಗ
ಮತ್ತೇಕೆ ರವಿ ಚಂದ್ರರ ಕಲ್ಪನೆ !!

47. ಕೋಮಲ ಹಾಸಿನಿ

ಕೋಮಲ ಹಾಸಿನಿ
ನಿನ್ನ ರೂಪದ ಜ್ಯೋತ್ಸ್ನದಿಂದ
ಹಕ್ಕಿಗಳಿಗೆ ಸೌಂದರ್ಯ ತಂದಿರುವೆ
ಮತ್ತೇಕೆ ಮೌನ !!

ಪದ್ಮರಾಗದ ಮಣಿಗೆ ನಿನ್ನ
ಅಂದದ ಸ್ವರ್ಣವನ್ನು ಸೇರಿಸಿರುವೆ
ಮತ್ತೇಕೆ ನವಮಣಿಗಳ
ವರ್ಣನೇ !!

ಹಳೆಬೀಡು ಶಿಲ್ಪಗಳಿಗೆ ಅಂದದ
ಕಲ್ಪನೆ ನೀನಾಗಿರುವೆ
ಮತ್ತೇಕೆ ಲಜ್ಜೆ !!

ಆ ಮಯಸಭೆಯಲ್ಲಿ ನಿನ್ನ
ಕಿರು ನಗೆಯಿಂದ ವಿದ್ಯುತ್
ದೀಪಗಳನ್ನು ಶೋಭಿಸಿರುವೆ
ಮತ್ತೇಕೆ ಕೌಮುದಿಯ ವರ್ಣನೇ !!

ಮಾಘ ಕಾವ್ಯದಲ್ಲಿ ನಿನ್ನ ಚೆಂದದ
ಸಿರಿಯಿಂದ ಶೀರ್ಷಿಕೆ ನೀನಾಗಿರುವಾಗ
ಮತ್ತೇಕೆ ನನ್ನ ವರ್ಣನೇ !!

48. ಸುಭಾಷಿತೆ



ಹೇ ಸುಭಾಷಿತೆ ಆ ಸುಧಾಂಶು
ನಿನ್ನ ಚೆಂದಕ್ಕಾಗಿಯೇ
ಹಿಂಬಾಲಿಸಿದ್ದಾನೆ !!

ಚಂದನ ವರ್ಣೆ ವೇಣುಗಾನದಲ್ಲಿ
ಸಹ ನಿನ್ನ ಹೆಸರೇ
ಕೇಳಿ ಬರುತ್ತಿದೆ !!

ಪಾರಿಜಾತ ಪ್ರಿಯೇ ಆ ದಿನಮಣಿಯು
ನಿನ್ನನ್ನು ಅರಗಿಣಿ
ಎಂದು ಸಂಭೋದಿಸಿದ್ದಾನೆ !!

ಅಷ್ಟು ಶೋಭಿಸುವವರೇ
ನಿನ್ನ ಅಂದವನ್ನು ಹೆಚ್ಚಿಸಿರುವಾಗ
ಮತ್ತೇಕೆ ನನ್ನ ವರ್ಣನೇ !!



49. ಬಾ ಕವಿತೆ

ನನ್ನ ಕಥೆಗೆ ನನ್ನದೆ ಶೀರ್ಷಿಕೆ
ಜೀವನದ ಪರ್ವದಲಿ ಚಿಂತೆಯೇ ಕಾಣಿಕೆ
ದು:ಖದ ತುಂತುರು ಸ್ಪರ್ಶಿಸಲು ಪೃಥ್ವಿಗೆ
ಎಂದು ಬರುವುದು “ವಿಹಸಿತದ ವಸಂತವು ಮನಸಿಗೆ !!

ಅಶ್ರುವಿನ ದೋಣಿಯು
ಸಾಗುತ್ತಿರಲು ನಿಲ್ದಾಣವಿಲ್ಲದೆ
ವ್ಯಥೆಯ ಸುಳಿಯಲ್ಲಿ ಸಿಲುಕಿರಲು
ಆನಂದದ ತೀರ ಸೇರದೆ !!

ನಿಂದನೆಯ ಅಲೆಗಳ ಬಡಿತಕ್ಕೆ
ಈ ಅಂತರಾಳವು ಕೃಶವಾಗಿದೆ
ಮಾತುಗಳ ಬಣ್ಣ ಬದಲಾಗುವಿಕೆಗೆ
ಈ ಮನವು ಮೌನವಾಗಿದೆ !!

ಸ್ವಾರ್ಥದಂಗಡಿಯಲಿ ಪುತ್ಥಳಿಯ ಬದುಕು
ಸತ್ಯವನು ಪೇಳುವರು ಎಲ್ಲಿಹರು ಹುಡುಕು
ತಾಳ್ಮೆಯಂತಹ ಕಲ್ಪವೃಕ್ಷವನ್ನು ಗಮನಿಸುವವರಾರು ! ?
ಸದಾ ಬಣ್ಣದ ಮಾತಿನ ನೆರಳನ್ನು ಬಯಸುವರು.



50. ಮೌನವ್ರತ

ಅಮ್ಮ ನಿನ್ನ ಮುಗ್ಧತೆಯನ್ನು
ತನ್ನಲ್ಲಿ ವಶಪಡಿಸಬೇಕೆಂದು
ಆ ಶಶವು ಉತ್ಪಲವು ಸೇರಿ
ಮಾಡುತಿವೆ ಮೌನವ್ರತ !!

ನಿನ್ನ ಹಿತವಚನವನ್ನು ಸಂಗ್ರಹಿಸಬೇಕೆಂದು
ಬೇಲೂರು ಶಿಲ್ಪಕಲೆಗಳು
ಸುಭಾಷಿತಗಳು ಸೇರಿ
ಮಾಡುತಿವೆ ಮೌನವ್ರತ !!

ನಿನ್ನ ಮಮತೆಯ ವೈಭವವನ್ನು
ಕಾಣಬೇಕೆಂದು ಆ
ಅರಣಿಯು ಹಿಮಾಂಶು ಸೇರಿ
ಮಾಡುತಿಹರು ಮೌನವ್ರತ

ನಿನ್ನ ಮಧುರವಾದ ಇಂಚರವನ್ನು
ಆಲಿಸಬೇಕೆಂದು ನುಪುರ ನಿನಾದವು
ಮೋಹನರಾಗವು
ಮಾಡುತ್ತಿವೆ ಮೌನವ್ರತ !!